# ಕೆ. ಅಮೀನ ಪೇಂಟರ್



ಡಾ. ಮಲ್ಲಿಕಾರ್ಜುನ ಮೇತ್ರಿ

ರಂಗಸಂಪನ್ನರು ಮಾಲಿಕೆ : ೨೨

# ಕೆ. ಅಮೀನ ಪೇಂಟರ್

ಡಾ. ಮಲ್ಲಿಕಾರ್ಜುನ ಮೇತ್ರಿ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

**K. AMEEN PAINTER** : A Monograph in Kannada by
Dr. Mallikarjun Metri
Head, Dept. of Kannada, A.R.S.I. Women's Collage of Arts & Science,
Bijapur
Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | | |
|---|---|---|
| Chief Editor | : | C. G. Krishnaswamy |
| Editors | : | Dr. Siddhaling Pattanshetti<br>K. V. Nagaraja Murthy,<br>T. Raghu, Hooli Shekhar |
| First Impression | : | March, 2001 |
| Pages | : | 56 |
| Cover Design | : | Krishna Raichur |

© Author

Printed by
Manohar Printing Press, Market, Dharwad - 580 001
Ph : 0836 – 790030
Price : Rs. 30/-

•

| | |
|---|---|
| ಕೆ. ಅಮೀನ ಪೇಂಟರ್ | : ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : ಡಾ. ಮಲ್ಲಿಕಾರ್ಜುನ ಮೇತ್ರಿ |
| ಪ್ರಕಾಶನ | : ಬಿ. ಟಿ. ಮುನಿರಾಜಯ್ಯ<br>ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ<br>ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೦೨ |
| ಪ್ರಧಾನ ಸಂಪಾದಕರು | : ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ<br>ಕೆ. ವಿ. ನಾಗರಾಜಮೂರ್ತಿ,<br>ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : ಮಾರ್ಚ್, ೨೦೦೧ |
| ಮುದ್ರಣ | : ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್<br>ಧಾರವಾಡ - ೫೮೦ ೦೦೧ |
| ಬೆಲೆ | : ರೂ. ೩೦/- |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧. ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್, ೨೦. ಗಜಾನನ ಮಹಾಲೆ, ೨೧. ಎಚ್. ಟಿ. ಅರಸು ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು

ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಕೆ. ಅಮೀನ ಪೇಂಟರ್ ಅವರನ್ನು ಕುರಿತು ಡಾ. ಮಲ್ಲಿಕಾರ್ಜುನ ಮೇತ್ರಿ ಅವರು ಬರೆದ ಪುಸ್ತಕ. ರಂಗಭೂಮಿಯಲ್ಲಿ ನಟ, ಸಂಗೀತಕಾರ, ನಾಟಕಕಾರ ಮುಂತಾದವರು ಸಾಮಾನ್ಯವಾಗಿ ಕಣ್ಣಿಗೆ ಕಾಣುತ್ತಾರೆ. ಆದರೆ ಅವರೆಲ್ಲರ ಪರೋಕ್ಷ ವ್ಯಕ್ತಿತ್ವಗಳ ಮೇಲೆ ಬಣ್ಣಬಣ್ಣದ ದೃಶ್ಯಾವಳಿಗಳ ಪಡದೆ - ಸೀನರಿಗಳ ಮೂಲಕ ಪ್ರಭಾವಚಿತ್ರಗಳನ್ನು ಬಿಡಿಸುವ ವೃತ್ತಿರಂಗದ ಜೀವಾಳವೇ ಆಗಿರುವ ಸೀನರಿ ಚಿತ್ರಕಾರರ ಬಗ್ಗೆ ನಮ್ಮ ಕಲಾಲೇಖನಿ ಬರೆದದ್ದು ಕಡಿಮೆ. ಈ ಪುಸ್ತಕದಲ್ಲಿ ಕೊಡಗುಳಿಯ ಅಮೀನ ಪೇಂಟರ್ ಅವರ ಬಗ್ಗೆ ಅನೇಕ ಮಹತ್ವದ ವಿವರಗಳಿವೆ. ಇಲಕಲ್ಲಿನ ಪ್ರಸಿದ್ಧ ಪಡದೆ ಚಿತ್ರಕಲಾವಿದ ಖೇಮರಾಜ ಕೆಂಧೂಳಿಯವರ ಪರಮಾಪ್ತ ಶಿಷ್ಯರಾದ ಅಮೀನ ಪೇಂಟರ್ ಅವರು ತಮ್ಮ ಪ್ರತಿಭಾವಂತ ಕುಂಚದಿಂದ ಬಿಡಿಸಿದ ತಿರುಪತಿ ತಿಮ್ಮಪ್ಪ, ರಾಘವೇಂದ್ರ ಸ್ವಾಮಿಗಳು, ಆಂಜನೇಯ, ಅನುಭವ ಮಂಟಪ, ಗೋಳಗುಂಬಜ, ಗುಡಿ-ಗುಂಡಾರಗಳು, ಪ್ರಾಕೃತಿಕ ದೃಶ್ಯಗಳು, ಕಲ್ಪನಾತ್ಮಕ ವ್ಯಕ್ತಿಚಿತ್ರಗಳು ಮುಂತಾದುವನ್ನು ಬಿಡಿಸುವಲ್ಲಿ ಸಾಧಿಸಿದ ಸಿದ್ಧಿ ಅಪರೂಪದ್ದು. ಹಲವಾರು ಕ್ಯಾಲೆಂಡರ್ ಕಂಪನಿಗಳಿಗೂ, ಕ್ಯಾಸೆಟ್ ಕಂಪನಿಗಳಿಗೂ, ಚಲನಚಿತ್ರಗಳಿಗೂ ತಮ್ಮ ಕಲಾಸೇವೆ ಸಲ್ಲಿಸಿದ ಅಮೀನರು ದೈವಭಕ್ತರು, ಕಲಾಸಕ್ತರು, ಮನುಷ್ಯ ನಿಷ್ಠರು. ಉತ್ತರ ಕರ್ನಾಟಕದ ಇಂಥ ಕಲಾವಿದನ ಬಗ್ಗೆ ರಂಗಭೂಮಿ ಅಭಿಮಾನ ಪಡುತ್ತದೆ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ., ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ–ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು ಸಿದ್ಧಲಿಂಗ ಪಟ್ಟಣಶೆಟ್ಟಿ
೧೦-೨-೨೦೦೧ ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


| | | |
|---|---|---|
| ೧. | ಪೀಠಿಕೆ, ಪೂರ್ವಜರು | ೯ |
| ೨. | ಜನನ, ವಿದ್ಯಾಭ್ಯಾಸ | ೧೦ |
| ೩. | ಶಿಕ್ಷಕನಾಗುವ ಆಶೆ ಹೊತ್ತು ಮೈಸೂರಿಗೆ | ೧೪ |
| ೪. | ತಾಯಿ ತೀರಿದಳು, ಮಲತಾಯಿ ಬಂದಳು | ೧೫ |
| ೫. | ಬೇಸರದ ಬದುಕೊಳಗೆ ಅಲೆಮಾರಿಯಾಗಿ | ೧೭ |
| ೬. | ನಾಲ್ಕಾಣೆಯ ನಂಟು | ೧೮ |
| ೭. | ನಂಟಾಯಿತು - ಜೀವದ ಗಂಟಾಯಿತು | ೧೯ |
| ೮. | ಅಲ್ಲಲ್ಲಿ ಪೇಂಟಿಂಗ್ಸ್ ಮಾಡುತ್ತ | ೨೦ |
| ೯. | ಉದಯವಾಯಿತು ಕೆ. ವಿ. ಫೈನ್ ಆರ್ಟ್ | ೨೨ |
| ೧೦. | ಅಪ್ಪಿಕೊಂಡರು ಗುರುಗಳು | ೨೩ |
| ೧೧. | ಪಾಟಿಲಿಲ್ಲ ಗುರುಗಳು ಹಾಕಿದ ಗೆರೆ | ೨೩ |
| ೧೨. | ಬಿರುಕು ಬಿಟ್ಟಿತು ಸಾಂಸಾರಿಕ ಬದುಕೊಳಗೆ | ೨೫ |
| ೧೩. | ಬೆಳೆಯುವ ಹಂಬಲದೊಂದಿಗೆ ಬೆಂಗಳೂರಿಗೆ | ೨೬ |
| ೧೪. | ಡಾ. ರಾಜಕುಮಾರರ ಸಂಪರ್ಕ | ೨೭ |
| ೧೫. | ತಮಿಳು ಕಲಾವಿದರ ಜೊತೆಗೆ | ೨೯ |
| ೧೬. | ದೆಹಲಿಯ ಚಿತ್ರಕಲಾ ಪ್ರದರ್ಶನದಲ್ಲಿ | ೨೯ |
| ೧೭. | ಬೆಂಗಳೂರು ಬದುಕು ಬೇಸರವೆನಿಸಿತು | ೩೦ |
| ೧೮. | ಮತ್ತೆ ಇಲಕಲ್ಲಿನಲ್ಲಿ | ೩೨ |
| ೧೯. | ಮರುಮದುವೆ | ೩೩ |
| ೨೦. | ಸ್ಮರಣೀಯ ಸಂಗತಿಗಳು | ೩೩ |
| ೨೧. | ನಮ್ಮ ನಾಡನ್ನು ಬಿಟ್ಟು ಹೋಗಲಿಲ್ಲ ಅಲ್ಲಿಗೆ | ೩೫ |
| ೨೨. | ಬಾಲಾಜಿ ಫೋಟೊ ಪ್ರಿಂಟಿಂಗ್ ಪ್ರಸಂಗ | ೩೫ |
| ೨೩. | ಸೋಜಿಗಪಟ್ಟೆ ತೇರದಾಳದ ಪ್ರಭುದೇವರ ಸನ್ನಿಧಾನವಲ್ಲಿ | ೩೬ |
| ೨೪. | ವ್ರತ ಮಾಡಿ ಚಿತ್ರ ಬರೆದೆ | ೩೭ |
| ೨೫. | ಸಮರಸವೇ ಜೀವನದ ಮಧ್ಯದಲ್ಲಿ | ೩೮ |
| | ಅನುಬಂಧಗಳು | ೪೧ |

## ಪೀಠಿಕೆ

'ಇಲಕಲ್ಲ' ಎಂದಾಕ್ಷಣ ಸೀರೆ, ಗ್ರಾನೈಟ್ ಕಲ್ಲು, ರಂಗಭೂಮಿ, ವಿಜಯ ಮಹಾಂತೇಶ ಮಠ ಹೀಗೆ ಹಲವು ಚಿತ್ರಗಳು ಕಣ್ಣಮುಂದೆ ನಿಲ್ಲುತ್ತವೆ. ಹೌದು, ಹಲವು ವಿಶೇಷತೆಗಳನ್ನು ಗಳಿಸಿಕೊಂಡ ಊರು ಅದು. ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಇಲಕಲ್ಲು ಕಲೆ, ಸಂಸ್ಕೃತಿ, ವಿದ್ಯೆ ಹಾಗೂ ವಾಣಿಜ್ಯ ಕ್ಷೇತ್ರಗಳಲ್ಲಿ ತನ್ನದೇ ಆದ ಖ್ಯಾತಿ ಗಳಿಸಿದೆ. ಇಲಕಲ್ಲದ ಸೀರೆಯಂತೂ ದೇಶದ ಹಲವು ರಾಜ್ಯಗಳಲ್ಲೂ ಪ್ರಸಿದ್ಧಿ ಪಡೆದಿದೆ. ಪಿಂಕ್ ಗ್ರಾನೈಟ್ ಕಲ್ಲು ಇಲ್ಲಿರುವುದರಿಂದ ಪ್ರಮುಖ ವಾಣಿಜ್ಯ ಕೇಂದ್ರವಾಗಿಯೂ ಹೆಸರು ಗಳಿಸಿದೆ. ಬದುಕನ್ನು ಉದಾತ್ತಗೊಳಿಸಲು ದುಡಿಯುತ್ತಿರುವ ಶ್ರೀ ವಿಜಯ ಮಹಾಂತೇಶ ಮಠವು ಇಲಕಲ್ಲಿನ ಖ್ಯಾತಿಯಲ್ಲಿ ಸಿಂಹಪಾಲು ಪಡೆದಿದೆ. ಹಾಗೆಯೇ ರಂಗಭೂಮಿಗಾಗಿ ದುಡಿಯುವ ಕಲಾವಿದರಿಂದಾಗಿಯೂ ಇಲಕಲ್ಲು ತನ್ನತನವನ್ನು ಮೆರೆದಿದೆ.

ಉತ್ತರ ಕರ್ನಾಟಕದ ವೃತ್ತಿ ರಂಗಭೂಮಿಯ ಬೆಳವಣಿಗೆಯ ಬೆನ್ನೆಲುಬಾಗಿ ನಿಂತ ಊರುಗಳಲ್ಲಿ ಇಲಕಲ್ಲು ಒಂದು. ಇಲ್ಲಿಯ ಮೆದಿಕೇರಿ ಯಮನಪ್ಪ, ಗುರಪ್ಪ ಸಹೋದರರ ಕಂಪನಿ, ಗುಡೂಸಾಬರ 'ಸರ್ವೋದಯ ನಾಟ್ಯಸಂಘ' ಗಳು ಈ ಪರಿಸರದಲ್ಲಿಯ ಅನೇಕ ಕಲಾವಿದರು, ನಿರ್ದೇಶಕರು, ನಾಟಕಕಾರರು, ಪೇಂಟರ್‌ಗಳು ಬೆಳೆಯಲು ಪ್ರೋತ್ಸಾಹ ನೀಡಿದವು. ಇಲ್ಲಿಯ ಧೋತ್ರೆ ಪೇಂಟರ್, ಕೆಂಧೂಳಿ ಪೇಂಟರ್ ನಾಡಿನ ತುಂಬೆಲ್ಲ ಹೆಸರು ಮಾಡಿದರು. ಇವರ ಪೇಟಿಂಗ್‌ಗಳಿಗೆ ಬೆರಗಾಗದವರೇ ಇಲ್ಲ. ಕೆಂಧೂಳಿ ಪೇಂಟರ್‌ರ ಕಲೆಯಂತೂ ತನ್ನದೇ ಛಾಪಿನೊಂದಿಗೆ ವಿಶೇಷ ಖ್ಯಾತಿ ಗಳಿಸಿಕೊಂಡಿತು. ಇವರ ಶಿಷ್ಯ ಕೆ.ಅಮೀನ ಪೇಂಟರ್, ಶ್ರೇಷ್ಠ ಗುರುವಿನ ಶ್ರೇಷ್ಠ ಶಿಷ್ಯರಾಗಿ ಕಲೆಯನ್ನು ಮೈಗೂಡಿಸಿಕೊಂಡು ಬೆಳೆದರು. ನಮ್ಮ ನಾಡಿನ ಶ್ರೇಷ್ಠ ಪೇಂಟರ್ ಎಂಬ ಖ್ಯಾತಿಗೆ ಒಳಗಾದ ಅಮೀನ ಪೇಂಟರ್‌ರು ಇಲಕಲ್ಲ ಪೇಂಟರ್, ಕೊಡಗಲಿಯ ಅಮೀನ ಪೇಂಟರ್, ಅಮರ್ ಪೇಂಟರ್ ಎಂಬ ಹೆಸರುಗಳಿಂದ ಪ್ರಸಿದ್ಧಿ ಪಡೆದದ್ದುಂಟು.

## ಪೂರ್ವಜರು

ಅಮೀನ್ ಪೇಂಟರ್‌ರ ಪೂರ್ವಜರು ಮೂಲತಃ ಇಲಕಲ್ಲ ಸಮೀಪದ ಕೊಡಗಲಿ ಗ್ರಾಮದವರು. ಇವರ ಹೆಸರಿನ ಜೊತೆಗಿರುವ 'ಕೆ' ಎಂಬುದು ಕೊಡಗಲಿ ಅಮೀನ ಎಂದು ಸೂಚಿಸುತ್ತದೆ. ಇವರ ಮುತ್ತಜ್ಜ ಮಿಯಾಸಾಬರು ಕೊಡಗಲಿಯಲ್ಲಿಯೇ ವಾಸವಾಗಿದ್ದು ಹೈದರಾಬಾದ್ ನಿಜಾಮನಿಂದ ಜಹಗೀರನ್ನು ಪಡೆದುಕೊಂಡಿದ್ದರು. ಸಾಹಸಕ್ಕೆ ಹೆಸರಾದ ಮಿಯಾಸಾಬರು ತುಂಬ ಗಟ್ಟಿಗರಾಗಿದ್ದರಂತೆ. ಇವರ ಮಗ

ಅಮೀನಸಾಬರು ತಂದೆಗೆ ಬಂದಿದ್ದ ಆಸ್ತಿಯನ್ನು ಆರಾಮಿ ಜೀವನ ಕಳೆಯುತ್ತ ಕರಗಿಸಿಬಿಟ್ಟರು. ಕಷ್ಟಕರವಾಗಿ ಬದುಕುತ್ತಿದ್ದ ಸಂದರ್ಭದಲ್ಲಿ ಅಲ್ಲೆಲ್ಲ ಪ್ಲೇಗ್ ಹರಡಿಕೊಂಡಿತ್ತು. ಈ ಗಂಟಿನ ಬೇನೆಗೆ ಎಷ್ಟೋ ಜನ ತುತ್ತಾದರು. ಸಾಂಸಾರಿಕ ಸಂಕಷ್ಟ ಹಾಗೂ ಪ್ಲೇಗಿನ ಭಯಕ್ಕೆ ನಲುಗಿದರು, ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಬದುಕಿದರು. ಇನ್ನು ಇಲ್ಲಿರುವದು ಬೇಡವೆಂದುಕೊಂಡ ಅಮೀನಸಾಬರು ಕೊಡಗಲಿ ಬಿಟ್ಟು ಸಮೀಪದಲ್ಲಿರುವ ವಾಣಿಜ್ಯ ಕೇಂದ್ರ, ಸೀರೆಯ ಊರು ಇಲಕಲ್ಲಿಗೆ ಬಂದು ನೆಲೆಸಿದರು. ಇಲಕಲ್ಲಿನ ಆರಂಭದ ದಿನಗಳಲ್ಲಿ ಇವರಿಗೆ 'ಹಮಾಲಿ' ಕೆಲಸವೇ ಜೀವಕ್ಕೆ ನೆಲೆಯಾಯಿತು.

ಅಮೀನಸಾಬರ ಹೆಂಡತಿ ಸಗರಬಿ. ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು. ಬಾವಾಸಾಬ, ಹುಸೇನಸಾಬ, ಮುರ್ತುಸಾಬ ಎಂಬುವು ಅವರ ಹೆಸರು. ಈ ತುಂಬು ಸಂಸಾರದೊಂದಿಗೆ ಬದುಕಿ ಇಲಕಲ್ಲಿನಲ್ಲಿಯೇ ಅಮೀನಸಾಬರು ಅಂತ್ಯವಾದರು. ಇವರ ಹಿರಿಯ ಮಗ ಬಾವಾಸಾಬರೇ ಪೇಂಟರ್ ಅಮೀನ ಅವರ ತಂದೆ. ಹಮಾಲಿ ಕೆಲಸ ಮಾಡುತ್ತ ಜೀವನ ನಡೆಸಿಹೋದ ಅಮೀನಸಾಬರು ಮಕ್ಕಳಿಗೆ ಯಾವ ಆಸ್ತಿಯನ್ನೂ ಬಳುವಳಿಯಾಗಿ ಬಿಟ್ಟಿರಲಿಲ್ಲ. ಇಲಕಲ್ಲಿನಲ್ಲಿ ವಾಸಿಸುತ್ತಿರುವ ಚಪ್ಪರ ಮನೆಯ ಜಾಗ ಬಿಟ್ಟರೆ ಬೇರೇನೂ ಇಲ್ಲ.

ಬಾವಾಸಾಬರು ತಂದೆ ಮಾಡುತ್ತಿದ್ದ ಹಮಾಲಿ ಕೆಲಸವನ್ನೆ ಮೊದಮೊದಲು ಮಾಡುತ್ತ ಜೀವನ ನಡೆಸುತ್ತಿದ್ದರು. ಮುಂದೆ ವಸ್ತ್ರದ ಎಂಬುವವರ ಅಡತಿ ಅಂಗಡಿಯಲ್ಲಿ ಕೂಲಿ ಕೆಲಸ ಮಾಡತೊಡಗಿದರು. ಕೂಲಿಯ ಕೆಲಸ ಬಿಟ್ಟು ವ್ಯಾಪಾರ ಮಾಡಬೇಕೆಂದು ಆರಂಭದಲ್ಲಿ ಕಿರುಕುಳ ವ್ಯಾಪಾರ ಮಾಡುತ್ತ ನಡೆದರು. ಇದರಲ್ಲಿ ಒಂದಿಷ್ಟು ಸುಧಾರಣೆ ಕಂಡ ಬಾವಾಸಾಬರು ಪುಟಾಣಿ ಕಡಲೆಯನ್ನು ಒಟ್ಟಾಗಿ ಖರೀದಿಸಿ ಮನೆಯಲ್ಲಿ ಪುಟಾಣಿ ತಯಾರಿಸಿ ಮಾರುತ್ತ ನಡೆದರು. ಇದು ಅವರ ಬದುಕಿನ ಕಷ್ಟಗಳನ್ನು ನೀಗಿಸಿತು. ಹಣ ಸಂಪಾದನೆ ಹೆಚ್ಚಿದಾಗ ಎಂಟು ಕೂರಿಗೆ (೩೨ ಎಕರೆ) ಜಮೀನ ಖರೀದಿಸಿದರು. ಈಗ ಆರ್ಥಿಕವಾಗಿ ತುಂಬಾ ಸುಧಾರಣೆಯನ್ನು ದುಡಿಯುವ ಛಲ, ವ್ಯಾಪಾರ ಜಾಣ್ಮೆಯಿಂದ ಕಂಡುಕೊಂಡರು.

## ಜನನ ವಿದ್ಯಾಭ್ಯಾಸ

ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದ ಕೌಟುಂಬಿಕ ಪರಿಸರದಲ್ಲಿ ಬಾವಾಸಾಬ ಹುಸೇನಬಿ ದಂಪತಿಗಳ ಚೊಚ್ಚಲ ಮಗನಾಗಿ ಅಮೀನ ಪೇಂಟರ್ ೨.೮.೧೯೫೦ ಬುಧವಾರದಂದು ಜನಿಸಿದರು. ತಂದೆ ಬಾವಾಸಾಬರು ಇಲಕಲ್ಲಿನಲ್ಲಿ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದ ಕಾಲವದು. ಮನೆಯ ಹಿರಿಮಗನಾಗಿ ಅಮೀನರು ಜನಿಸಿದ್ದರಿಂದ ಕುಟುಂಬ ಸಂಬಂಧಿಗಳಿಗೆಲ್ಲ ಆನಂದ. ಇವರಿಗೆ ಪ್ರೀತಿಯ

ಸುರಿಮಳೆ. ತಂದೆಯ ಪ್ರೀತಿಯ ಆರೈಕೆಯಲ್ಲಿ, ಮಾತೆಯ ಮಮತೆಯ ಮಡಿಲೊಳಗೆ ಯಾವ ಆತಂಕಕ್ಕೂ ಒಳಗಾಗದೇ ಬೆಳೆಯುತ್ತ ಏಳನೆಯ ವರ್ಷಕ್ಕೆ ಕಾಲಿಟ್ಟರು. ಅಶಿಕ್ಷಿತರಾಗಿದ್ದ ತಂದೆ ಬಾವಾಸಾಬರು ಮಗ ಒಂದಿಷ್ಟು ಕಲಿಯಲಿ ಎಂಬ ಹಂಬಲದಿಂದ ಇವರನ್ನು ಸ್ಥಳೀಯ ಉರ್ದೂ ಮಾಧ್ಯಮದ ಪ್ರಾಥಮಿಕ ಶಾಲೆಗೆ ಸೇರಿಸಿದರು. ಮನೆಯ ವಾತಾವರಣದಿಂದ ಶಾಲೆಗೆ ಸೇರಿದ ಅಮೀನರಿಗೆ ಭಯ ಆತಂಕ ಆವರಿಸಿದವು. ಕುತೂಹಲದಿಂದ ಕಣ್ಣು ಬಿಡುತ್ತ ಶಾಲೆಯ ಮಾಸ್ತರರ ದಪ್ಪ ಮೀಸೆ ನೋಡಿ ಹೆದರಿದ್ದುಂಟು. ಮೊದಲ ದಿನಗಳಲ್ಲಿ ಅಂಜಿ ಜ್ವರ ಬಂದಿದ್ದವಂತೆ. 'ಛಡಿ ಛಮ್ ಛಮ್, ವಿದ್ಯಾ ಘುಮ್ ಘುಮ್' ಎಂಬ ತತ್ವಕ್ಕೆ ಬದ್ಧರಾಗಿದ್ದ ಆ ಶಾಲೆಯ ಮಾಸ್ತರರು ಮಕ್ಕಳ ಬೆಳವಣಿಗೆಗೆ ಹಗಲಿರುಳು ದುಡಿಯುತ್ತಿದ್ದರು.

'ಬೆಳೆಯುವ ಸಿರಿ ಮೊಳೆಯಲ್ಲಿ' ಎಂಬಂತೆ ಅಮೀನರಲ್ಲಿ ಮೂರು ನಾಲ್ಕನೆಯ ತರಗತಿ ಕಲಿಯುವಾಗಲೇ ಚಿತ್ರಗಳ ಕುರಿತು, ವಿವಿಧ ಬಣ್ಣಗಳ ಕುರಿತು ತುಂಬಾ ಕುತೂಹಲ. ಎಷ್ಟೋ ಸಲ ಪಾಟಿಯ ಮೇಲೆ ಅಕ್ಷರಗಳನ್ನು ಚಿತ್ರವಾಗಿಸಿದ್ದುಂಟು. ಇದನ್ನು ಕಂಡು ಸಿಟ್ಟಿಗೆ ಬಂದ ಪಟೇಲ ಮಾಸ್ತರರು ''ನೀ ಏನು ಅಕ್ಷರ ಬರಿಯುವ ಮನುಷ್ಯ ಆಗಂಗಿಲ್ಲಂತ ಕಾಣಸ್ತದ. ಬರೀ ಚಿತ್ರ, ಚಿತ್ರ ಬರೀತಿಯಲ್ಲೋ. ಮುಂದ ಒಬ್ಬ ಒಳ್ಳೆಯ ಚಿತ್ರ ಕಲಾವಿದನಾಗಿ ಹೆಸರು ಗಳಿಸಿಕೋ'' ಎಂದದ್ದು ಇಂದು ಸತ್ಯವಾಗಿದೆ. ಚಿತ್ರ ಬರೆದದ್ದಕ್ಕೆ ಏಟು ತಿಂದದ್ದು, ಹಾಗೇ ಸಿಟ್ಟಿನ ಭರಾಟೆಯಲ್ಲಿಯೇ ಹರಿಸಿಕೊಂಡದ್ದು ಮರೆಯಲಿಕ್ಕಾಗದು.

ಪುಸ್ತಕದ ಪುಟ ಪುಟಗಳಲ್ಲಿ ಚಿತ್ರ, ಪಾಟಿಯ ಮೇಲೆ ಚಿತ್ರ, ಮನಕ್ಕೆ ಬಂದಂತೆ ಚಿತ್ರಿಸುವುದು, ಹಾಗೇ ಸುಮ್ಮನೇ ಗೀಚುವುದು ಪ್ರಾಥಮಿಕ ಹಂತದಲ್ಲಿ ಸದಾ ನಡೆದೇ ಇರುತ್ತಿತ್ತು. ಇತಿಹಾಸ ಇಷ್ಟವಾದ ವಿಷಯವಾಗಿ ಅಲ್ಲಿ ಬರುವ ಕಥಾರೂಪಿ ಘಟನೆಗಳನ್ನು ಆಸಕ್ತಿಯಿಂದ ಕೇಳಿ ಕಲ್ಪನಾಲೋಕಕ್ಕೆ ಸಂಚಾರ ಮಾಡುತ್ತಿದ್ದರು. ಅಲ್ಲಿಯ ಘಟನೆಗಳನ್ನು ಕಣ್ಣ ಮುಂದೆ ತಂದುಕೊಂಡು ಒಬ್ಬರೇ ಆನಂದಪಟ್ಟಿದ್ದುಂಟು. ಪ್ರಾಥಮಿಕ ಆರು ಹಾಗೂ ಏಳನೆಯ ತರಗತಿ ಹಂತದಲ್ಲಿ ಕಲಿಸಿದ ಪಟೇಲ ಹಾಗೂ ಕರ್ನೂಲ ಮಾಸ್ತರರನ್ನು ಕುರಿತು ತುಂಬಾ ಅಭಿಮಾನ ಇವರಿಗೆ. ಅವರು ಕಳಕಳಿಯಿಂದ ಕಲಿಸಿದ ರೀತಿ ಮೆಚ್ಚುವಂತಹುದು. ಯಾವ ಫಲಾಪೇಕ್ಷೆ ಇಲ್ಲದೆ ರಾತ್ರಿ ಶಾಲೆ ನಡೆಸುತ್ತಿದ್ದರು. ದಿನದ ಅವಧಿಯಲ್ಲಿ ಕಲಿಸಿದ ಪಾಠಗಳನ್ನು ರಾತ್ರಿಯ ಹೊತ್ತಿನ (ಸಾಯಂಕಾಲ ಏಳರಿಂದ ಹತ್ತು ಘಂಟೆಯ ವರೆಗೆ) ಸಂದರ್ಭದಲ್ಲಿ ಮನನ ಮಾಡಿಸುತ್ತಿದ್ದರು. ಇಷ್ಟೆ ಅಲ್ಲ, ಮತ್ತೆ ನಸುಕಿನ ಐದು ಗಂಟೆಗೆ ಎಚ್ಚರಗೊಳಿಸಿ ಅಭ್ಯಾಸಕ್ಕೆ ತೊಡಗಿಸುತ್ತಿದ್ದರು. ಇಂತಹ ಶಿಕ್ಷಕರ ಕುರಿತು ಅಮೀನರೊಬ್ಬರಿಗೇಕೆ ಎಲ್ಲರಿಗೂ ಅಭಿಮಾನ ಗೌರವ ಮೂಡುವುದು ಸಹಜವೆ.

'ಕಾಯಕವೇ ಕೈಲಾಸ'ವೆಂದುಕೊಂಡ ಶಿಕ್ಷಕರ ಶಿಷ್ಯರಾಗಿಯೂ ಅಮೀನ ಪೇಂಟರ್‌ರು ಅಭ್ಯಾಸವನ್ನು ಅಷ್ಟಾಗಿ ಹಚ್ಚಿಕೊಳ್ಳಲಿಲ್ಲ. ಓದು ಅಷ್ಟಕಷ್ಟೆ. ಆದರೆ ಕಲೆ, ಇತಿಹಾಸ, ಬಣ್ಣ ಇವುಗಳೆಂದರೆ ಪ್ರಾಣ. ನವಿಲು, ಬಾತುಕೋಳಿ, ಗುಡ್ಡ, ಗಿಡ ಮುಂತಾದವು ಅಮೀನ ಅವರು ಆರಂಭಿಕ ಹಂತದಲ್ಲಿ ಬರೆಯುತ್ತಿದ್ದ ಚಿತ್ರಗಳು. ಏಳನೆಯ ತರಗತಿ ಕಲಿಯುವ ಸಂದರ್ಭದಲ್ಲಿ ಗಣರಾಜ್ಯೋತ್ಸವ ಆಚರಣೆ ನೆನಪಿಸುವ ಚಿತ್ರ ತೆಗೆದು ಮಾಸ್ತರರಿಗೆ ತೋರಿಸಿ ಶಭಾಸಗಿರಿ ಪಡೆದರು. ಹುನಗುಂದ ಕೇಂದ್ರಕ್ಕೆ ಹೋಗಿ ಏಳನೆಯ ತರಗತಿಯ ಪರೀಕ್ಷೆ ಬರೆದು ಪಾಸಾದರು.

ಉರ್ದೂ ಮಾಧ್ಯಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಪೂರೈಸಿದ ಅಮೀನರಿಗೆ ಇಲಕಲ್ಲಿನಲ್ಲಿ ಉರ್ದೂ ಮಾಧ್ಯಮದ ಪ್ರೌಢಶಾಲೆ ಇಲ್ಲದ ಕಾರಣಕ್ಕೆ ಕನ್ನಡ ಮಾಧ್ಯಮದ ಹೈಸ್ಕೂಲ್ ಸೇರಬೇಕಾಗಿ ಬಂತು. ಇವರು ಸೇರಿದ ಪ್ರೌಢಶಾಲೆ ಆ ಭಾಗದಲ್ಲಿ ಒಳ್ಳೆಯ ಹೆಸರನ್ನು ಗಳಿಸಿಕೊಂಡಿತ್ತು. ಬಿಜ್ಜಲ ಮುಖ್ಯೋಪಾಧ್ಯಾಯರು ಈ ಶಾಲೆಯ ಏಳಿಗೆಗೆ ಹಗಲಿರುಳೂ ಶ್ರಮಿಸುತ್ತಿದ್ದರು. ಅಲ್ಲಿ ಗುಂಡಮಿ ಎಂಬುವವರು ವಿಜ್ಞಾನವನ್ನು, ಹಳವಯ್ಯನವರು ಗಣಿತವನ್ನು, ಬಾರಿಗಿಡದವರು ಇತಿಹಾಸವನ್ನು, ಚಿಕ್ಕಾ ಎಂಬುವವರು ಕನ್ನಡವನ್ನು, ವಸ್ತ್ರದವರು ಹಿಂದಿಯನ್ನು, ವಾರಿಯವರು ಚಿತ್ರಕಲೆಯನ್ನು ಕಲಿಸುತ್ತಿದ್ದರು. ದೈಹಿಕ ಶಿಕ್ಷಕರಾಗಿ ಪಡಸಲಕರ ಎಂಬುವವರಿದ್ದರು. ಈ ಶಾಲೆಯ ಸಮಸ್ತ ಶಿಕ್ಷಕರು ವಿದ್ಯಾರ್ಥಿಗಳ ಕುರಿತು ತುಂಬಾ ಕಳಕಳಿ ಹೊಂದಿದವರು. ಉರ್ದೂ ಮಾಧ್ಯಮದಲ್ಲಿ ಕಲಿತು ಬಂದಿದ್ದರೂ ಅಮೀನ ಅವರಿಗೆ ಈ ಶಾಲೆಯ ಆತ್ಮೀಯ ವಾತಾವರಣ ಆಹ್ಲಾದವನ್ನುಂಟು ಮಾಡಿತು. ಕನ್ನಡ ಕಲಿಸುವ ಚಿಕ್ಕಾ ಶಿಕ್ಷಕರು ಅಮೀನ ಅವರಿಗೆ ವಿಶೇಷ ಗಮನ ಹರಿಸಿ ಕನ್ನಡವನ್ನು ಕಲಿಸಿದರು. ಹೀಗಾಗಿ 'ಉರ್ದೂ ಮಾಧ್ಯಮದಿಂದ ಬಂದವನು' ಎಂಬ ಅಮೀನರ ಆರಂಭದ ಭಯ ತಾನೇ ತಾನಾಗಿ ಹೋಗಿ ಕನ್ನಡ ಮಾಧ್ಯಮಕ್ಕೆ ಹೊಂದಿಕೊಂಡರು. ಪ್ರಾಥಮಿಕ ಶಾಲೆಯಂತೆ ಇಲ್ಲಿಯೂ ಶಾಲಾ ಶಿಕ್ಷಕರು ಸಾಯಂಕಾಲ ಏಳು ಗಂಟೆಯಿಂದ ಹತ್ತು ಗಂಟೆಯ ವರೆಗೆ ಕೆಲವು ವಿಶೇಷ ಕ್ಲಾಸುಗಳನ್ನು ತೆಗೆದುಕೊಳ್ಳುತ್ತಿದ್ದರು. ಅಮೀನ ಅವರಿಗೆ ಈ ಶಾಲೆಯ ಕಟ್ಟುನಿಟ್ಟಿನ ಶೈಕ್ಷಣಿಕ ವಾತಾವರಣ ಸುಧಾರಣೆ ಕಾಣಲು ಸಹಾಯಕವಾಯಿತು. ಆಟದಲ್ಲಿ ಅಷ್ಟೊಂದು ಆಸಕ್ತಿ ಹೊಂದದ ಇವರು ಪಾಠದಲ್ಲಿ ಈಗ ಒಂದಿಷ್ಟು ಆಸಕ್ತಿ ತೋರುತ್ತಿದ್ದರು.

ಇಲ್ಲಿಯ ಚಿತ್ರಕಲಾ ಶಿಕ್ಷಕರಾದ ವಾರಿಯವರು ಇವರಿಗೆ ಪ್ರೀತಿಯ ಗುರುಗಳಾದರು. ಕಲೆಯಲ್ಲಿ ಆಸಕ್ತಿ ಹೊಂದಿದ ಅಮೀನ ಅವರು ಗುರುಗಳ ಮಾರ್ಗದರ್ಶನದಲ್ಲಿ ಚಿತ್ರಕಲೆಯ ಕುರಿತು ತುಂಬಾ ತಿಳಿದುಕೊಂಡರು. ಇಲ್ಲಿ ಇವರ ಕಲೆ ಅಭಿವೃದ್ಧಿಗೊಂಡಿತು. ಚಿತ್ರಕಲೆಗೆ ಸಂಬಂಧಿಸಿದ 'ಇಂಟರ್‌ಮಿಡಿಯೆಟ್ ಫರ್ಸ್‌ಟ' ಹಾಗೂ 'ಪ್ರೈಮರಿ ಚಿತ್ರಕಲಾ ಪರೀಕ್ಷೆ'ಗಳೆರಡನ್ನು ಗುರುಗಳಾದ ವಾರಿಯವರ

ಮಾರ್ಗದರ್ಶನ ಪಡೆದು ಮುಗಿಸಿದರು. ಇವರು ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಾಗ ಚಿತ್ರಕಲಾ ಪ್ರದರ್ಶನವೊಂದನ್ನು ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಅಮೀನರ ಜೊತೆಗೆ ಓದುತ್ತಿದ್ದವರನೇಕರು ಅದರಲ್ಲಿ ಭಾಗವಹಿಸಿದ್ದರು. ಅಲ್ಲಿ ಅತ್ಯುತ್ತಮವಾದ ಎರಡು ಚಿತ್ರಗಳನ್ನು ಆಯ್ಕೆ ಮಾಡಲಾಯಿತು. ಅಮೀನರ 'ರಾಶಿ' ಮಾಡುವ ಚಿತ್ರ ಮೊದಲ ಬಹುಮಾನಕ್ಕೆ ಆಯ್ಕೆಯಾಯಿತು. ಈ ಚಿತ್ರ ತುಂಬ ನೈಜವಾಗಿ ಒಕ್ಕಲಿಗನೊಬ್ಬ ಹಂತಿ ಹೊಡೆದು, ಕಂಕಿ ಬೇರ್ಪಡಿಸಿ 'ಮದ'ವನ್ನು ಮೆಟ್ಟಿ ನಾಲಿಗೆ ಮೇಲೆ ನಿಂತು ತೂರುತ್ತಿರುವದು, ಆಗ ಕಾಳು ಸಂಗ್ರಹವಾಗಿ ಹೊಟ್ಟು ಹಾರಿಹೋಗುತ್ತಿರುವದು, ಕೆಳಗೆ ಸಂಗ್ರಹವಾದ ಕಾಳುಗಳಿಂದ ಗೊಂಡಿಯನ್ನು ಸೊಡ್ಡು ಹೊಡೆದು ಇನ್ನೊಬ್ಬ ಬೇರ್ಪಡಿಸುತ್ತಿರುವದನ್ನು ಚಿತ್ರಿಸುತ್ತಿತ್ತು. ತಮ್ಮ ಚಿತ್ರಕ್ಕೆ ಬಹುಮಾನ ಬಂದದ್ದು ಅಮೀನ ಅವರಿಗೆ ಹಿಗ್ಗು ತಂದಿತು. ಮುಂದೆ ವಾರ್ಷಿಕೋತ್ಸವ ಸಂದರ್ಭದಲ್ಲಿ ಇದಕ್ಕಾಗಿ ಕಂಠಿಯವರಿಂದ ಪ್ರಶಸ್ತಿ ಪತ್ರವನ್ನು ಪಡೆದರು. ಗೆಳೆಯರ ಜೊತೆ ಅಷ್ಟೊಂದು ಬೆರೆಯದೇ ಏಕಾಂಗಿಯಾಗಿಯೇ ಇರುತ್ತಿದ್ದ ಅಮೀನರು ತಕ್ಕಮಟ್ಟಿಗೆ ಅಭ್ಯಾಸ ಮಾಡಿ ಸಾಮಾನ್ಯ ಮಟ್ಟದಲ್ಲಿ ಎಸ್.ಎಸ್.ಎಲ್.ಸಿ. ಯನ್ನು ೧೯೬೬ ರಲ್ಲಿ ಪಾಸು ಮಾಡಿದರು.

ಎಸ್.ಎಸ್.ಎಲ್.ಸಿ. ನಂತರ ಮುಂದೇನು ಎಂಬ ಪ್ರಶ್ನೆ ಎದುರಾದಾಗ ಅಮೀನ ಅವರ ಆಸಕ್ತಿಗೆ ಅನುಗುಣವಾಗಿ ಹಿರಿಯರೊಬ್ಬರು ಡಿ.ಟಿ.ಸಿ. ಕಲಿತರೆ ಚಿತ್ರಕಲಾ ಶಿಕ್ಷಕನಾಗಬಹುದೆಂಬ ಸಲಹೆಯನ್ನು ನೀಡಿದರು. ಮಾವ ಗೊಖರ್‌ಸಾಬರು ಇದಕ್ಕೆ ಒಪ್ಪಿಗೆ ಕೊಟ್ಟರು. ಆಗ ಈ ಕೋರ್ಸ್ ಕಲಿಯಲು ಗದುಗಿಗೆ ಹೋಗಬೇಕಾಗುತ್ತಿತ್ತು. ಅಲ್ಲಿಯ ''ವಿಜಯ ಆರ್ಟ್ಸ್ ಇನ್‌ಸ್ಟಿಟ್ಯೂಟ್'' ಇಂಥ ಶಿಕ್ಷಣ ನೀಡುತ್ತಿತ್ತು. ಅಮೀನ ಅವರ ತಂದೆಗೆ ಗದುಗಿನಲ್ಲಿ ಒಬ್ಬರು ಆತ್ಮೀಯರಿದ್ದರು. ಅವರಿಗೆ ಪತ್ರದ ಮುಖಾಂತರ ಬರೆದು ಕೇಳಲಾಗಿ ಎಲ್ಲ ಅನುಕೂಲ ಮಾಡುತ್ತೇವೆ ಬನ್ನಿ ಎಂದು ಮರುಟಪಾಲಿನಲ್ಲಿ ತಿಳಿಸಿದರು. ಈಗ ಅಮೀನ ಅವರು ಡಿ.ಟಿ.ಸಿ. ಕಲಿಯಲು ತಂದೆಯೊಂದಿಗೆ ಜೋಳ, ಗೋದಿ ಮುಂತಾದ ಆಹಾರ ಸಾಮಗ್ರಿಗಳ ಜೊತೆಗೆ ಗದುಗಿಗೆ ಪ್ರಯಾಣ ಬೆಳೆಸಿದರು. ಮೊದಲೇ ಪತ್ರ ಬರೆದಿದ್ದ ಗೆಳೆಯರ ಮನೆಯಲ್ಲಿ ತಂಗಿ ''ವಿಜಯ ಆರ್ಟ್ಸ್ ಇನ್‌ಸ್ಟಿಟ್ಯೂಟ್''ನಲ್ಲಿ ಹೆಸರು ನೋಂದಾಯಿಸಿದರು.ಅಮೀನ ಅವರ ಊಟ ವಸತಿಯ ಎಲ್ಲ ಜವಾಬ್ದಾರಿಯನ್ನು ತಮ್ಮ ಗೆಳೆಯರಿಗೆ ಒಪ್ಪಿಸಿ ಬಾವಾಸಾಬರು ಇಲಕಲ್ಲಿಗೆ ಮರಳಿದರು.

ಹೊಸ ವಾತಾವರಣದ ಮಧ್ಯದಲ್ಲಿ ಅಮೀನ ತಮ್ಮ ಶಾಂತ ಸ್ವಭಾವದಿಂದ ಎಲ್ಲರಿಗೂ ಬೇಕಾದರು. ಶಿಕ್ಷಕರು ಇವರ ಕಲೆಗೆ ತುಂಬಾ ಪ್ರೋತ್ಸಾಹ ನೀಡಿ ಬೆಳೆಯುವಂತೆ ಮಾಡುತ್ತಿದ್ದರು. ಹೈಸ್ಕೂಲಿನಲ್ಲಿದ್ದಾಗಲೇ ಚಿತ್ರಕಲೆ ಹಾಗೂ ಪೇಂಟಿಂಗ್ ಕುರಿತು ಸಾಕಷ್ಟು ಅರಿತಿದ್ದ ಇವರು ಸಹಜವಾಗಿಯೇ ಅಲ್ಲಿ ತಮ್ಮ ಜಾಣ್ಮೆಯಿಂದ

ಎಲ್ಲರ ಗಮನ ಸೆಳೆದರು. ಗೆಳೆಯರ ಬಳಗದಲ್ಲಿ ಪ್ರಿಯರಾದರು. ಹೀಗಿದ್ದಾಗ ಬಾವಾಸಾಬರ ಗೆಳೆಯ ಅಮೀನರಿಗೆ ಒಂದು ದಿನ ''ತಮ್ಮಾ, ನಿನ್ನ ಊಟ ವಸತಿ ವ್ಯವಸ್ಥೆಯನ್ನು ಬೇರೆಡೆ ಮಾಡಿಕೊ'' ಎಂದು ತಿಳಿಸಿದರು. ಈ ಮಾತು ಕೇಳಿದ ಅಮೀನರಿಗೆ ಆಕಾಶವೇ ಕಳಚಿ ಬಿದ್ದಂತಹ ಅನುಭವವಾಯಿತು. ನಾನೇನು ತಪ್ಪು ಮಾಡಿದ್ದೇನೆ. ಅವರ ಕುಟುಂಬಕ್ಕೆ ನಾನು ಹೊರೆಯಾದೆನೇ, ಹೀಗೆ ಹಲವು ಪ್ರಶ್ನೆಗಳು ಧುತ್ತೆಂದು ಎದುರಾದವು. ಅರಿವಿಲ್ಲದಂತೆ ಕಣ್ಣೀರು ಉದುರಿದವು. ಮರುದಿನ ಗೆಳೆಯರಲ್ಲಿ ಈ ಕುರಿತು ಮಾತಾನಾಡಿದಾಗ ಮೂರು ಜನ ಗೆಳೆಯರು, ''ನಮ್ಮ ಕೋಣೆಯಲ್ಲಿ ನೀನು ನಾಲ್ಕನೆಯವನಾಗಿ ಇದ್ದು ಬಿಡು. ನಮ್ಮಲ್ಲಿದ್ದರೆ ಊಟಕ್ಕೆ ಚಿಂತೆ ಇಲ್ಲ. ದಿವಸ ನಮ್ಮೆಲ್ಲರದು ಬುತ್ತಿ ಬರುತ್ತದೆ, ಅದರಲ್ಲೆ ಹಂಚಿಕೊಂಡು ಊಟ ಮಾಡೋಣ '' ಎಂದರು. ಗೆಳೆಯರ ಈ ಮಾತುಗಳು ಅಮೀನರಿಗೆ ಧೈರ್ಯ ತಂದುಕೊಟ್ಟವು. ಇವರೆಲ್ಲ ಗದಗ ಸಮೀಪದ ಹೊಂಬಳ, ಹುಲಕೋಟಿ, ಆಲೂರಿನವರಾಗಿದ್ದರು.

ಮರುದಿವಸ ಗೆಳೆಯರ ಕೋಣೆ ಸೇರಿದ ಅಮೀನ ಗೆಳೆಯರಿಗೆ ಹೆಚ್ಚು ಹೊರೆಯಾಗಬಾರದೆಂದುಕೊಂಡು ಸಾಯಂಕಾಲ ಎಲ್ಲಾದರೂ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಅಲ್ಲಲ್ಲಿ ವಿಚಾರಿಸಿದರು. ಗದಗದಲ್ಲಿ ಕಲ್ಲಪ್ಪ ಹುಯಿಲಗೋಳ ಎನ್ನುವವರು ವೃತ್ತಿರಂಗಭೂಮಿಯ ವಿವಿಧ ಕಂಪನಿಗಳಿಗೆ ಪರದೆ ಮುಂತಾದವುಗಳನ್ನು ಬಾಡಿಗೆ ರೂಪದಲ್ಲಿ ಕೊಡುತ್ತಿದ್ದರು. ಅವರಿಗೆ ಈಗೊಬ್ಬ ಪೇಂಟರ ಬೇಕಾಗಿದ್ದ. ಈ ಸುದ್ದಿ ತಿಳಿದ ಅಮೀನರು ಅವರನ್ನು ಕಂಡು ಕೆಲಸದ ವಿವರ ಪಡೆದು ನಾನು ಮಾಡುವೆ ಎಂದು ತಿಳಿಸಿದರು. ಊಟ ಹಾಗೂ ಸ್ವಲ್ಪ ಹಣ ಕೊಡುವ ಕರಾರಿನ ಮೇರೆಗೆ ಅಲ್ಲಿ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ ಪೂರೈಸಿದರು. ಹಲವು ಎಡರು ತೊಡರುಗಳ ಮಧ್ಯದಲ್ಲಿ ಆ ವರ್ಷದ ಡಿ.ಟಿ.ಸಿ. ಪರೀಕ್ಷೆಯಲ್ಲಿ ಇನ್‌ಸ್ಟಿಟ್ಯೂಟ್‌ಗೆ ಪ್ರಥಮ ಸ್ಥಾನ ಪಡೆದುಕೊಳ್ಳುವದರ ಮೂಲಕ ೧೯೬೯ ರಲ್ಲಿ ಮುಗಿಸಿದರು. ಈ ಕಾರಣ ಅಮೀನ ಅವರಿಗೆ ಸಮಾರಂಭವೊಂದರಲ್ಲಿ ಸಂಸ್ಥೆಯವರು ೫೦೧ ರೂಪಾಯಿಗಳನ್ನು ಕೊಡಮಾಡಿದರು. ಈ ಸಮಾರಂಭಕ್ಕೆ ಸರೋಜಿನಿ ಮಹಿಷಿಯವರು ಅತಿಥಿಗಳಾಗಿ ಬಂದದ್ದು ವಿಶೇಷವಾಗಿತ್ತು.

## ಶಿಕ್ಷಕನಾಗುವ ಆಶೆ ಹೊತ್ತು ಮೈಸೂರಿಗೆ

ಡಿ.ಟಿ.ಸಿ. ಮುಗಿಸಿ ಇಲಕಲ್ಲಿಗೆ ಬಂದ ಅಮೀನರಿಗೆ ಶಿಕ್ಷಕನಾಗಬೇಕೆಂಬ ಹಂಬಲ ಬಲವಾಯಿತು. ಈ ಕಾರಣ ಸುತ್ತಲಿನ ಪ್ರದೇಶದ ಕೆಲ ವಿದ್ಯಾಸಂಸ್ಥೆಗಳಲ್ಲಿ ವಿಚಾರಿಸಿದಾಗ ಎಲ್ಲೂ ಹುದ್ದೆ ತೆರವಿರಲಿಲ್ಲ. ಚಿಕ್ಕ ಪುಟ್ಟ ಪೇಂಟಿಂಗ್ ಮಾಡುತ್ತ ದಿನಗಳನ್ನು

ಕಳೆಯುತ್ತಿದ್ದಾಗ ಪತ್ರಿಕೆಯೊಂದರಲ್ಲಿ ''ವಿಶ್ವೇಶ್ವರ ಕಲಾ ಕಾಲೇಜು, ಮೈಸೂರು'' ಇಲ್ಲಿ ಚಿತ್ರಕಲಾ ಶಿಕ್ಷಕ ಬೇಕಾಗಿದ್ದಾರೆಂಬ ಜಾಹೀರಾತನ್ನು ಕಂಡರು. ಸಂತೋಷದಿಂದ ಅರ್ಜಿ ಸಲ್ಲಿಸಿದರು. ಕೆಲವು ದಿನ ಸಂದ ಬಳಿಕ ಸಂದರ್ಶನಕ್ಕೆ ಆಹ್ವಾನ ಬಂತು. ತಂದೆಗೆ ಈ ಕುರಿತು ತಿಳಿಸಿದಾಗ, ಸಂದರ್ಶನಕ್ಕೆ ಅಷ್ಟು ದೂರ ಹೋಗುವದು ಬೇಡ. ಅಲ್ಲದೆ ಈಗ ನನ್ನ ಹತ್ತಿರ ಹಣವಿಲ್ಲವೆಂದು ತಿಳಿಸಿದರು. ನಿರಾಶೆಯಿಂದ ಅಮೀನ ಅವರು ಗುರುಗಳಾದ ಪಟೇಲ ಮಾಸ್ತರರಲ್ಲಿ ಈ ವಿಚಾರ ಅರುಹಿದಾಗ ಆವರು ಬಾವಾಸಾಬರನ್ನು ಕಂಡು ಆತ ಸಂದರ್ಶನಕ್ಕೆ ಹೋಗಿ ಬರಲಿ. ನಾನು ೧೦೦ ರೂ. ಕೊಡುವೆ. ನೀವು ಒಂದಿಷ್ಟು ಹೊಂದಿಸಿ ಕಳುಹಿಸಿಕೊಡಿರಿ ಎಂದು ಸೂಚಿಸಿದರು. ಆಗ ಬಾವಾಸಾಬರು ಈ ಕುರಿತು ತಾವು ಕೆಲಸ ಮಾಡುತ್ತಿದ್ದ ಅಡತಿ ಅಂಗಡಿ ಮಾಲಿಕರಾದ ವಸ್ತ್ರದ ಅವರಿಗೆ ತಿಳಿಸಿ ಸಹಾಯ ಕೋರಿದರು. ವಸ್ತ್ರದ ಅವರು ೧೦೦ ರೂ. ಕೊಟ್ಟರು. ಬಾವಾಸಾಬರು ತಮ್ಮಲ್ಲಿದ್ದ ೫೦ ರೂ.ಗಳನ್ನು ಕೂಡಿಸಿ ಅಮೀನರಿಗೆ ಸಂದರ್ಶನಕ್ಕೆ ಹೋಗಿ ಬರಲು ಹರಸಿದರು. ಗದಗ ಮಾರ್ಗವಾಗಿ ಅಮೀನ ಮೈಸೂರು ತಲುಪಿದರು. ಸಂದರ್ಶನ ನಡೆಯುವ ವಿಶ್ವೇಶ್ವರಯ್ಯ ಕಲಾ ಕಾಲೇಜಿಗೆ ಹೋಗಿ ನೋಡಿದಾಗ ಪೈಪೋಟಿಯೇ ಇಲ್ಲ. ಇವರೊಬ್ಬರೇ ಸಂದರ್ಶನಕ್ಕೆ ಬಂದಿದ್ದರು. ಸರಳ ರೀತಿಯಲ್ಲಿಯೇ ಸಂದರ್ಶನ ಮುಗಿಯಿತು. ೨,೩ ದಿವಸದ ನಂತರ ತಮಗೆ ಅಂತಿಮ ವಿಚಾರವನ್ನು ತಿಳಿಸಲಾಗುತ್ತದೆಂದು ಪ್ರಾಚಾರ್ಯರು ತಿಳಿಸಿ ತಾವು ಊರಿಗೆ ಹೋಗುವುದು ಬೇಡ, ಕಾಲೇಜಿನ ವಿದ್ಯಾರ್ಥಿ ನಿಲಯದಲ್ಲಿ ಇರಿ ಎಂದು ವ್ಯವಸ್ಥೆ ಕಲ್ಪಿಸಿದರು. ನಾಲ್ಕನೆಯ ದಿನಕ್ಕೆ ಪ್ರಾಚಾರ್ಯರು ಕರೆಸಿ, ''ತಾವು ನಮ್ಮ ಕಾಲೇಜಿಗೆ ೫,೦೦೦ ರೂ.ಗಳನ್ನು ದೇಣಿಗೆ ರೂಪದಲ್ಲಿ ನೀಡಿದರೆ ತಮ್ಮನ್ನು ಶಿಕ್ಷಕರೆಂದು ನೇಮಿಸಿಕೊಳ್ಳಲು ನಿರ್ಧರಿಸಿದ್ದೇವೆ'' ಎಂದು ತಿಳಿಸಿದರು. ಈ ವಿಚಾರ ಕೇಳಿದ ಅಮೀನರಿಗೆ ಅಲ್ಲಿ ಶಿಕ್ಷಕರಾಗುವ ಆಸೆ ಕಳೆಗುಂದಿತು. ನಮ್ಮ ತಂದೆಯವರಿಗೆ ಕೇಳಿ ತಮಗೆ ತಿಳಿಸುವೆ ಎಂದು ಪ್ರಾಚಾರ್ಯರಿಗೆ ಹೇಳಿ ಮರಳಿ ಇಲಕಲ್ಲಿಗೆ ಬಂದರು. ತಂದೆಯವರಲ್ಲಿ ಇದನ್ನು ಕೇಳಿದಾಗ ''ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ'' ಎಂದುಕೊಂಡು ಸಾಧ್ಯವಾಗದು, ''ನೀನಿನ್ನು ನೌಕರಿ ಮಾಡುವ ಆಶೆ ಬಿಡು ಇಲ್ಲೆ ಸಾಕಷ್ಟು ಬಣ್ಣದ ಕೆಲಸ ದೊರೀತಿದೆ, ಅದನ್ನು ಮಾಡು, ಸಾಕು'' ಎಂದರು. ತಮ್ಮನ್ನು ತಾವೇ ಶಪಿಸಿಕೊಂಡ ಅಮೀನರು ''ಹಣ ಕೊಡಲು ಸಾಧ್ಯವಾಗದು'' ಎಂದು ಮೈಸೂರಿಗೆ ಪತ್ರ ಬರೆದು ಸುಮ್ಮನಾದರು.

## ತಾಯಿ ತೀರಿದಳು, ಮಲತಾಯಿ ಬಂದಳು

''ಹಡದ ತಾಯಿಯ ಮುಂದ ಹಾಲು ಕುಡಿದರ ಥಂಡ
ಮಲತಾಯಿ ಮುಂದ ಮರಿಗುದುರಿ ಏರಿದರ
ಮನದಾಗ ಚಿಟಗಿ ಮುರದಾಳ''

ತಾಯಿ ಮಲತಾಯಿಯ ರೀತಿಯನ್ನು ಅರಹುವ ಈ ಜಾನಪದ ತ್ರಿಪದಿಯು ತಾಯಿಯ ವಾತ್ಸಲ್ಯಕ್ಕೆ ಸರಿಯುಂಟೆ ಜಗದೊಳಗೆ ಎಂಬುದನ್ನು ತಿಳಿಸುತ್ತದೆ. ತಾಯಿ ಕರುಣೆಯ ಸಾಗರ. ಕ್ಷಮೆಯ ಆಗರ. ಅವಳು ಭೂಲೋಕದ ದೇವತೆ. ಅವಳ ಹೃದಯಾಂತರಾಳದಲ್ಲಿ ಮಗುವಿನ ಚಿತ್ರ ಕೆತ್ತಲ್ಪಟ್ಟಿರುತ್ತದೆ. ಮಗುವಿನಿಂದ ತಾಯಿ ದೂರಾದಳೆಂದರೆ ಮಗುವಿಗೆ ಹೇಗಾಗಬೇಡ. ದುಃಖ ಮಡುಗಟ್ಟುತ್ತದೆ. ಮನಸ್ಸು ದೇಹ ಭಾರವಾಗುತ್ತದೆ. ಮೌನ ಆವರಿಸುತ್ತದೆ. ಅಮೀನರಿಗೆ ಹೆತ್ತ ತಾಯಿ ತೀರಿದಾಗ ಹೀಗೆಲ್ಲ ಆಯಿತು.

ಇವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ತಾಯಿ ಹುಸೇನಬಿ ಅವರಿಗೆ ಕ್ಷಯರೋಗ ಆವರಿಸಿತು. ಮನೆಯಲ್ಲಿ ಕಿತ್ತು ತಿನ್ನುವ ಬಡತನ. ಸಣ್ಣ ತಮ್ಮ ತಂಗಿಯರು. ತಂದೆಯೊಬ್ಬರೆ ದುಡಿಯುವವರು. ಪರಿಸ್ಥಿತಿ ತುಂಬ ಗಂಭೀರ ಹಂತಕ್ಕೆ ತಲುಪಿತು. ಆಗ ಬಾವಾಸಾಬರು ಮಗ ಅಮೀನರನ್ನು ಕರೆದುಕೊಂಡು ಹುಸೇನಬಿ ಅವರಿಗೆ ತೋರಿಸಲು ಹುಬ್ಬಳ್ಳಿ ಕೆ.ಎಂ.ಸಿ. ಆಸ್ಪತ್ರೆಗೆ ನಡೆದರು. ಪರೀಕ್ಷಿಸಿದ ವೈದ್ಯರು ''ನೀವು ಕನಿಷ್ಠ ಆರು ತಿಂಗಳಾದರೂ ಇಲ್ಲಿ ಉಳಿಯಬೇಕಾಗುತ್ತದೆ. ಈಗ ರೋಗ ಅಂತಿಮ ಹಂತಕ್ಕೆ ಬಂದಿದೆ, ಬೇಗ ಗುಣವಾಗುವದು ಕಷ್ಟ'' ಎಂದರು. ಈ ಮಾತು ಕೇಳಿದ ಬಾವಾಸಾಬರು ೨ ದಿವಸ ಆಸ್ಪತ್ರೆಯಲ್ಲಿ ಉಳಿದು ಗುಣಮುಖವಾದರೆ ಸಾಕೆಂದು ವೈದ್ಯರಿಗೆ ಕೈಮುಗಿದರು. ಇಲ್ಲಿ ಜೀವನ ಹೇಗೆ ಎಂಬ ಚಿಂತೆ ಆರಂಭವಾಯಿತು. ಧೈರ್ಯ ತಂದುಕೊಂಡ ಬಾವಾಸಾಬರು ೨ ದಿವಸ ಆಸ್ಪತ್ರೆಯಲ್ಲೆ ಉಳಿದು ಸಮೀಪದಲ್ಲಿ ಒಂದು ಚಿಕ್ಕ ಕೋಣೆಯನ್ನು ಬಾಡಿಗೆ ತೆಗೆದುಕೊಂಡರು. ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಅಮೀನರಿಗೆ ಒಪ್ಪಿಸಿ ಅಲ್ಲಿಯೇ ಅಲ್ಲಲ್ಲಿ ಕೆಲಸ ಮಾಡತೊಡಗಿದರು.

ಈ ವೇಳೆಯಲ್ಲಿ ಅಮೀನರು ಅನುಭವಿಸಿದ ದುಃಖ ಹೇಳಲಸದಳವಾದದ್ದು. ಬಾಲಕ ಅಮೀನರು ಆಸ್ಪತ್ರೆಯಲ್ಲಿ ತಾಯಿಯ ಜೊತೆಯೆ ಹೆಚ್ಚಾಗಿ ಇದ್ದು ಅವಳು ವಿಶ್ರಾಂತಿ ಪಡೆಯುವ ಹೊತ್ತಿನಲ್ಲಿ ಉರುವಲು ಕಟ್ಟಿಗೆ ಆಯ್ದು ತರುವದು, ಅನ್ನ ಮಾಡುವದು, ಕಸ ಗೂಡಿಸುವದು, ಮುಸೂರೆ ತಿಕ್ಕುವದು ಏನೆಲ್ಲ ಕೆಲಸ ಮಾಡುತ್ತ ನಡೆದರು. ಹೀಗೆಯೇ ಆರೈಕೆ ಏಳು ತಿಂಗಳು ಕಳೆಯಿತು. ಹುಸೇನಬಿ ಅವರಿಗೆ ಹುಶಾರಿಯಾಗುವ ಲಕ್ಷಣ ಕಾಣಲಿಲ್ಲ. ನಿರಾಶರಾದ ಬಾವಾಸಾಬರು ಮತ್ತೆ ಮತ್ತೆ ವೈದ್ಯರನ್ನು ವಿಚಾರಿಸತೊಡಗಿದರು. ಒಂದು ದಿನ ''ನಾವು ನಮ್ಮ ಪ್ರಯತ್ನವನ್ನೆಲ್ಲ ಮಾಡಿದ್ದೇವೆ, ನೀವು ಅವರನ್ನು ಊರಿಗೆ ಕರೆದುಕೊಂಡು ಹೋಗುತ್ತೇನೆ ಎಂದರೆ ಇಂದೇ ಬಿಡುಗಡೆ ಮಾಡಲಾಗುತ್ತದೆ ಎಂದರು.'' ಆಯ್ತು, ನಾವು ಊರಿಗೆ ಹೊರಡುತ್ತೇವೆ ಎಂದರು ಬಾವಾಸಾಬರು ದುಃಖ ತುಂಬಿದ ಧ್ವನಿಯೊಳಗೆ. ತಾಯಿಗೆ ಗುಣವಾಗಲಿಲ್ಲವೆಂದು ಅಮೀನ ಅತ್ತರು. ಕ್ಷೀಣವಾಗಿದ್ದ ಹುಸೇನಬಿಯವರನ್ನು

ಇಲಕಲ್ಲಿಗೆ ಕರೆದುಕೊಂಡು ಬಂದರು. ಏನೆಲ್ಲ ರೀತಿಯ ಆರೈಕೆ ಮಾಡಿದರು. ಆರೈಕೆ ಪ್ರಯೋಜನಕ್ಕೆ ಬಾರದೆ ಹುಸೇನಬಿ ದೈವಾಧೀನರಾದರು. ಕುಟುಂಬಕ್ಕೆಲ್ಲ ಕತ್ತಲೆ ಕವಿಯಿತು. ಬಾವಾಸಾಬರು ಮರುಗಿದರು. ತಬ್ಬಲಿಗಳಾದ ಅಮೀನ ಹಾಗೂ ತಮ್ಮ ತಂಗಿಯರು ಗೋಳೋ ಎಂದು ಅತ್ತತ್ತು ಸುಣ್ಣವಾದರು. ಈ ವೇಳೆಯಲ್ಲಿ ಒಂದಿಷ್ಟು ಮಮತೆಯಿಂದ ಕಾಕೂ ರಾಜಮಾ ನೋಡಿಕೊಂಡರು.

ತಾಯಿ ತೀರಿ ಎರಡು ವರ್ಷ ಕಳೆಯುವ ಸರಿ ಸಂದರ್ಭದೊಳಗೆ ಬಾವಾಸಾಬರು ತಾಜಬಿ ಎಂಬುವವರನ್ನು ಮರುಮದುವೆಯಾದರು. ಅಮೀನರ ತಾಯಿ ತೀರಿದ ಮನೆಗೆ ಮಲತಾಯಿ ಬಂದಳು. ಮೊದಮೊದಲು ತಾಜಬಿ ಈ ಮಕ್ಕಳನ್ನು ಚೆನ್ನಾಗಿಯೇ ನೋಡಿಕೊಂಡರು. ಆದರೆ ಅವರಿಂದ ಮುಂದೆ ಅನೇಕ ರೀತಿಯ ದುಃಖ ಅನುಭವಿಸಿದರು. ಮಮ್ಮಲ ಮರುಗಿದರು.

## ಬೇಸರದ ಬದುಕೊಳಗೆ ಅಲೆಮಾರಿಯಾಗಿ

ಅಸಹನೆಯ ಬದುಕು ಬೇಸರ ಹುಟ್ಟಿಸಿ ದಿನಗಳನ್ನು ಕಳೆಯುವದು ಕಠಿಣವೆನಿಸಿದಾಗ ಮನುಷ್ಯ ಒಂದೆಡೆ ನಿಲ್ಲುವದು ಕಷ್ಟವೆ. ಹೊಂದಿಕೆಯಾಗದ ಮನಸ್ಸುಗಳ ಮಧ್ಯದಲ್ಲಿ ಏನಿದ್ದರೂ ಶೂನ್ಯವೆನಿಸುತ್ತದೆ, ನಿಂತರೂ, ಕುಳಿತರೂ ಸಮಾಧಾನವಿಲ್ಲ. ಈ ಹೊತ್ತಿನೊಳಗೆ ಬೆಳೆಯುತ್ತಿರುವ ಅಮೀನರಿಗೆ ಮನೆಯಲ್ಲಿ ನಿಲ್ಲಲಾಗದಷ್ಟು ಬೇಸರ ಅಲ್ಲಲ್ಲಿ ಕೆಲಸ ಮಾಡಿ ಕೂಡಿಹಾಕಿದ ಅಲ್ಪ ಹಣದೊಂದಿಗೆ ಅಮೀನರು ಇದ್ದಕ್ಕಿದಂತೆ ಯಾರಿಗೂ ತಿಳಿಸದೆ ಇಲಕಲ್ಲಿನಿಂದ ಇರುಳೊಳಗೆ ಹೊರನಡೆದರು. ಟ್ರಕ್ಕೊಂದನ್ನು ಹತ್ತಿ ವಿಜಾಪುರ ಸೇರಿದರು. ಇಂಥಲ್ಲೆ ಹೋಗಬೇಕೆಂಬ ನಿರ್ಧಾರವಿಲ್ಲದ ಅಮೀನರು ಸುಮ್ಮನೆ ಅಡ್ಡಾಡುತ್ತ ಪುಣೆ ಸೇರಿದರು. ಅಲ್ಲಿ ಕೋಕೋ ಕೋಲಾ ಕಂಪನಿಯ ಜಾಹೀರಾತು ಬೋರ್ಡ್ ಬರೆಯುತ್ತಿರುವ ಪೇಂಟರನನ್ನು ಅಮೀನ ನೋಡುತ್ತ ನಿಂತರು. ಆತ ಏನೂ ಪ್ರತಿಕ್ರಿಯೆ ತೋರಲಿಲ್ಲ. ಮರುದಿನ ಆ ಪೇಂಟರ್ ಕೆಲಸಕ್ಕೆ ಬರುವ ಮುಂಚೆಯೇ ಅಮೀನ ಅಲ್ಲಿದ್ದರು, ಪೇಂಟರ್ ಈಗ ಅಮೀನರನ್ನು ವಿಚಾರಿಸಿದ. ಇವರ ಕಥೆ ಕೇಳಿದ. ನನ್ನ ಸಹಾಯಕನಾಗಿ ಕೆಲಸ ಮಾಡು, ನಮ್ಮ ಕಂಪನಿಯ ಮಾಲಿಕರಿಗೆ ಹೇಳುವೆ ಎಂದಾಗ ಅಮೀನರಿಗೆ ಖುಶಿಯಾಯಿತು. ಪೇಂಟರನ ಸಹಾಯಕನಾಗಿ ಒಂದು ವರ್ಷ ಕೆಲಸ ಮಾಡಿದರು.

ಈ ಹೊತ್ತಿನಲ್ಲಿ ಮುಂಬೈಯ ಆರ್. ಕೆ. ಸ್ಟುಡಿಯೋದಲ್ಲಿ ಅತ್ಯಂತ ಜರೂರಾಗಿ ನೆಟ್‌ವರ್ಕ್ಸ್ ಹಾಗೂ ಪೇಂಟಿಂಗ್ಸ್ ಕೆಲಸಗಳು ಇದ್ದ ಕಾರಣ ಪುಣಾದ ಪೇಂಟರ್ ಅಮೀನರ ಜೊತೆಗೆ ಅಲ್ಲಿಗೆ ತೆರಳಿದರು. ಈಗ ಇವರಿಬ್ಬರ ಸಂಬಂಧ ತುಂಬ ಅನ್ಯೋನ್ಯವಾಗಿತ್ತು. ಪುಣೆಯ ಪೇಂಟರ್ ನಾಲ್ಕು ದಿವಸವಿದ್ದು ಮುಖ್ಯ ಕೆಲಸ ನಿರ್ವಹಿಸಿ

ಅಮೀನರನ್ನು ಅಲ್ಲಿರುವ ಇನ್ನುಳಿದ ಕೆಲಸಕ್ಕೆ ನಿರ್ದೇಶನ ಕೊಟ್ಟು ಮರಳಿದನು. ಈಗ ಅಮೀನ ಮುಂಬಯಿ ವಾಸಿ. ಅಲ್ಲಿಯೇ ಕೆಲಸ ನಡೆಯಿತು.

ರಾಜಕಪೂರ ಭಾರತೀಯ ಚಲನಚಿತ್ರರಂಗದಲ್ಲಿ ದೊಡ್ಡ ಹೆಸರು. ಅವರು ನಟ, ನಿರ್ದೇಶಕರಾಗಿ ಮಾಡಿದ ಕೆಲಸ ಅನನ್ಯ. ಭಾವಲೋಕದೊಳಗೆ ತೇಲಾಡುತ್ತ ಹಲವು ಕನಸು ಕಟ್ಟಿಕೊಂಡು ಆರ್. ಕೆ. ಸ್ಟುಡಿಯೋ ಸ್ಥಾಪಿಸಿ ಆ ಮೂಲಕ ಸಾಕಾರ ಗೊಳಿಸಿದವರು. ಅಮೀನ ತಮ್ಮಷ್ಟಕ್ಕೆ ತಾವು ಬಣ್ಣ ಬಳಿಯುತ್ತ ಮಗ್ನರಾಗಿದ್ದ ಒಂದು ಮುಂಜಾನೆ ಹೊತ್ತಿನಲ್ಲಿ ಸ್ಟುಡಿಯೋಕ್ಕೆ ರಾಜಕಪೂರ ಆಗಮಿಸಿದರು. ಇವರ ಆಗಮನವನ್ನು ಗಮನಿಸದಷ್ಟು ಮಗ್ನರಾಗಿದ್ದ ಅಮೀನ ಬಣ್ಣ ಬಳಿಯುವದನ್ನು ಕಂಡ ರಾಜಕಪೂರ ''ಭೇಷ, ನೀನು ನಿಜವಾದ ಕಲಾವಿದ, ನನ್ನ ಮನದೊಳಗೆ ನಿನ್ನ ಚಿತ್ರ ಮನೆ ಮಾಡಿತೆಂದು'' ಸಂತೋಷ, ಅಭಿಮಾನ ವ್ಯಕ್ತಪಡಿಸಿದರು.

ಈಗಾಗಲೇ ಅಮೀನರು ಇಲಕಲ್ಲ ಬಿಟ್ಟು ಎರಡು ವರ್ಷ ಕಳೆದಿದ್ದವು. ತಂದೆ ಹಾಗೂ ಬಂಧುಗಳು ಎಲ್ಲೆಲ್ಲೊ ಇವರನ್ನು ಹುಡುಕಾಡಿ ಸಿಗದಿದ್ದಾಗ ಸುಸ್ತಾಗಿದ್ದರು. ಮಾವ ಗೋಖಿರಸಾಬನಿಗೆ ಅಮೀನರು ಮುಂಬಯಿಯಲ್ಲಿರುವ ಸುದ್ದಿ ಹೇಗೋ ಗೊತ್ತಾಯಿತು.ತಡಮಾಡದೆ ಮುಂಬಯಿಗೆ ಬಂದು ಅಮೀನರನ್ನು ಪತ್ತೆ ಹಚ್ಚಿಯೆ ಬಿಟ್ಟರು. ಮಾವನನ್ನು ಕಂಡ ಇವರಲ್ಲಿ ಗಾಬರಿ ಸಂತೋಷಗಳೆರಡು ಮೇಳೈಯಿಸಿ ಕಣ್ಣೀರು ಉದುರಿದವು. ''ಅಮೀನ, ಯಾಕೆ, ಅಳುವದು ಬೇಡ. ಆದದ್ದು ಆಯಿತು. ದುಃಖ ಕಣ್ಣೀರು ಏಕೆ, ನಾವೆಲ್ಲ ಇಲ್ಲವೇ. ನಡೆ ನಮ್ಮೂರಿಗೆ. ಹೀಗೆ ನೀನೊಬ್ಬನೆ ಇಲ್ಲಿರುವದು ಬೇಡ. ಸಾಕಿನ್ನು ಅಲೆಮಾರಿಯಾಗಿ ಅಡ್ಡಾಡುವದು. ಒಂದೆಡೆ ನೆಲೆ ನಿಲ್ಲು'' ಎಂದು ತಿಳಿಸಿ ಹೇಳಿ ಅಮೀನರ ಮನವೊಲಿಸಿ ಇಲಕಲ್ಲಿಗೆ ಕರೆದುಕೊಂಡು ಬಂದರು.

### ನಾಲ್ಕಾಣೆಯ ನಂಟು

ಅಮೀನರಿಗೆ ಆಗ ಕಷ್ಟದ ದಿನಗಳು. ನೆಮ್ಮದಿ ಎಂಬುದೇ ಇಲ್ಲ. ಇಂಥ ಕಷ್ಟಕಾಲದಲ್ಲಿ ಸಹಾಯಕ್ಕೆ ನಿಂತವರು ಸೋದರಮಾವ ಗೋಖಿರಸಾಬ. ಇವರು ಇಲಕಲ್ಲಿನಲ್ಲಿಯೇ ಶಿಕ್ಷಕರಾಗಿದ್ದುಕೊಂಡು ಪೇಂಟಿಂಗ್ ಕೆಲಸವನ್ನು ನಿರ್ವಹಿಸುತ್ತಿದ್ದರು. ''ರಾಜ್'' ಎಂಬ ಫೋಟೊ ಸ್ಟುಡಿಯೋ ಕೂಡ ತೆರೆದಿದ್ದರು. ಶ್ರೇಷ್ಠ ಕಲಾವಿದರಾದ ಖೇಮರಾಜ ಕೆಂಧೂಳಿಯವರು ಇವರ ಸ್ನೇಹಿತರಾಗಿದ್ದರು. ಕೆಂಧೂಳಿಯವರ ಕಲಾ ಕೌಶಲ್ಯಕ್ಕೆ ಬೆರಗಾಗದವರಿಲ್ಲ. ಇಬ್ಬರೂ ಸೇರಿಯೇ ಎಷ್ಟೋ ಪೇಂಟಿಂಗ್ ಕೆಲಸಗಳನ್ನು ನಿರ್ವಹಿಸುತ್ತಿದ್ದರು. ಗೋಖಿರಸಾಬ ಅಳಿಯ ಅಮೀನರಿಗೆ ತಾವು ಕೆಲಸ ಮಾಡುತ್ತಿದ್ದಾಗ ಪ್ರೀತಿಯಿಂದ ಕರೆದು ಇದರ ಕುರಿತು ಹೇಳುತ್ತಿದ್ದುದಲ್ಲದೇ ಸಹಾಯಕ್ಕೆ ಬಳಸಿಕೊಳ್ಳುತ್ತಿದ್ದರು. ಅಮೀನರಲ್ಲಿ ಕಲಾಸಕ್ತಿ ಹೆಚ್ಚು ಅರಳಲು ಇದು ಕಾರಣವಾಯಿತು.

ಮೊದಲೇ ಇದರಲ್ಲಿ ಪ್ರಾಣವಿಟ್ಟುಕೊಂಡ ಇವರಿಗೆ ಶಾಲೆ ಬಿಟ್ಟ ತಕ್ಷಣ ಕೆಂಧೂಳಿಯವರು ಮತ್ತು ಗೋಖಿರಸಾಬ ಕೆಲಸ ಮಾಡುವ ಶೆಡ್ಡಿಗೆ ನೇರ ಪ್ರಯಾಣ. ಅಲ್ಲಿ ಸಹಾಯಕನಾಗಿ ಹರ್ಷ ಪಡುತ್ತ ಸೇವೆ. ಇದಕ್ಕಾಗಿ ನಾಲ್ಕಾಣೆ ಭಕ್ಷೀಸು. ಈಗ ಹೇಳಲಾರದ ಹಿಗ್ಗು. ನಾಲ್ಕಾಣೆ ಸಿಕ್ಕ ನಂತರ ಅಲ್ಲಿಂದ ಜಾಗ ಬಿಟ್ಟ ಅಮೀನರು ಅಜಾದ ಚಿತ್ರಮಂದಿರಕ್ಕೆ ಹೋಗುತ್ತಿದ್ದರು. ಇದು ರೂಢಿಯಾಯಿತು. ನಾಲ್ಕಾಣೆಯ ನಂಟು ಸಿನೇಮಾ ನೋಡುವ ಹವ್ಯಾಸಗಳು ಇವರಲ್ಲಿ ಪೇಂಟಿಂಗ್ ಕುರಿತು ಹೆಚ್ಚೆಚ್ಚು ತಿಳಿದುಕೊಳ್ಳಲು ಹಚ್ಚಿದವು.

ಕೆಂಧೂಳಿಯವರು ತನ್ಮಯರಾಗಿದ್ದುಕೊಂಡು ನಾಟಕದ ಪರದೆಗಳಿಗೆ ಬಣ್ಣ ಬಳಿಯುತ್ತಿರುವುದನ್ನು ಮೂಕವಿಸ್ಮಿತರಾಗಿ ಅಮೀನ ನೋಡುತ್ತಿದ್ದರು. ತಮಗೆ ಆಯಾಸವಾದಾಗಲೆಲ್ಲ ಇವರಿಂದ ಕೆಲಸ ತೆಗೆದುಕೊಳ್ಳುತ್ತಿದ್ದರು. ಕ್ರಮೇಣ ಈ ಕಲೆಯ ಕುರಿತು ಅರಿತುಕೊಳ್ಳುತ್ತ ನಡೆದಂತೆ ಕುತೂಹಲವು ಹೆಚ್ಚುತ್ತ ನಡೆಯಿತು. ಕೆಲಸ ತುಂಬ ಹೆಚ್ಚಾದಾಗ ಶಾಲೆ ಬಿಟ್ಟು ಮಾವ ಗೋಖಿರಸಾಬರಿಗೆ ಹಾಗೂ ಗುರುಗಳಾದ ಕೆಂಧೂಳಿಯವರಿಗೆ ನೆರವಾಗತೊಡಗಿದರು. ಅಮೀನರು ಕೆಂಧೂಳಿಯವರ ಕಲಾಪ್ರೌಢಿಮೆಗೆ ಹಣೆ ಮಣಿದು ಅವರನ್ನು ಗುರುಗಳೆಂದು ಸ್ವೀಕರಿಸಿದರು. ಗುರುಗಳೆಂದಾಕ್ಷಣ ನಿರಂತರವಾಗಿ ಅಭ್ಯಾಸವಾಗಲಿ, ಕಟ್ಟುನಿಟ್ಟಿನಿಂದ ಶಿಸ್ತಾಗಿ ಮಾಹಿತಿ ನೀಡುವದಾಗಲಿ ನಡೆಯಲಿಲ್ಲ.ಕೆಂಧೂಳಿಯವರಿಗೆ ಸಹಾಯಕರಾಗಿ ಕೆಲಸ ಮಾಡುತ್ತಲೇ ಅವರಿಂದ ಏನೆಲ್ಲ ತಿಳಿಯತೊಡಗಿದರು. ಗುರುಗಳೆಂದು ಸಂಬೋಧಿಸಿದರು. ಗುರು ಶಿಷ್ಯ ಸಂಬಂಧ ಬೆಳೆದಂತೆ ಮುಂದೆ ತುಂಬ ಅನ್ಯೋನ್ಯರಾದರು.

## ನಂಟಾಯಿತು - ಜೀವದ ಗಂಟಾಯಿತು

''ಆಪತ್ಕಾಲಕ್ಕೆ ಆದವನೆ ನೆಂಟ.'' ಅಮೀನರ ಅಪತ್ಕಾಲದಲ್ಲಿ ಸಹಾಯಕ್ಕೆ ಬಂದ ಬಣ್ಣ ಬಳೆಯುವ ಕೆಲಸ ನಂಟಾಯಿತು. ಜೀವನದ ಗಂಟಾಯಿತು. ಗುರುಗಳೆಂದು ತಿಳಿದು ಕೆಂಧೂಳಿಯವರು ಹೇಳಿದ ಕೆಲಸವನ್ನು ಶಿರಸಾವಹಿಸಿ ನಿರ್ವಹಿಸುತ್ತ ಅವರಿಗೆ ಕರಗತವಾದ ಕೆಲಸವನ್ನು ತಮ್ಮ ಕೈಗಳಿಗೆ ಕುದುರುವ ಹಾಗೇ ಮಾಡಿದರು. ಆರಂಭಿಕ ಹಂತದಲ್ಲಿ ಗೆರೆ ಹೊಡೆಯುವದು, ಬಣ್ಣ ಮಾಡುವದು, ಸಹಾಯಕರಾಗಿ ದುಡಿಯುವದು ಮಾಡುತ್ತ ನಡೆದರು. ಹೀಗೆ ಮಾಡುತ್ತಲೇ ಅಮೀನ ಬಣ್ಣದ ಪರದೆಗಳಿಗೆ ಕೆಲಸ ನಿರ್ವಹಿಸುವದನ್ನು ತಕ್ಕಮಟ್ಟಿಗೆ ಕಲಿತರು. ಕೆಲಸದ ಒತ್ತಡ ತೀವ್ರವಾದಾಗಲಂತೂ ಪರದೆಯೊಂದರ ಸಂಪೂರ್ಣ ಜವಾಬ್ದಾರಿ ಇವರ ಮೇಲೆಯೇ.

ಒಂದು ಸಲ ಕೆಂಧೂಳಿಯವರಿಗೆ ಬಿಡುವಿಲ್ಲದ ಕೆಲಸ. ಈ ವೇಳೆಯಲ್ಲಿ ಆರ್.ಜಿ. ಕರಿನಂದಿಯವರ ವೃತ್ತಿನಾಟಕ ಕಂಪನಿಯು ಗುಳೇದಗುಡ್ಡದಲ್ಲಿ ಕ್ಯಾಂಪ್ ಮಾಡಿತ್ತು.

ಇವರು ನಾಟಕಗಳಿಗೆ ಬಳಸುತ್ತಿದ್ದ ಪರದೆಗಳೆಲ್ಲ ಬಣ್ಣ ಕಳೆದುಕೊಂಡು ಮಾಸಲು ಮಾಸಲು ಆಗಿ ತಮ್ಮ ಆಕರ್ಷಣೆಯನ್ನು ಕಳೆದುಕೊಂಡಿದ್ದವು. ಅವರು ಅವುಗಳಿಗೆ ತೀವ್ರವಾಗಿ ಪುನಃ ಬಣ್ಣ ಮಾಡಬೇಕಾಗಿತ್ತು. ಕೆಂಧೂಳಿಯವರಲ್ಲಿಗೆ ಬಂದು ಈ ವಿಚಾರ ತಿಳಿಸಿದರು. ಈಗ ನನ್ನಿಂದ ಅಲ್ಲಿಗೆ ಬಂದು ಬಣ್ಣ ಮಾಡಲು ಆಗದೆಂದರು. ಕರಿನಂದಿಯವರು ಮತ್ತೆ ಮತ್ತೆ ಕೇಳಿದಾಗ ಅಲ್ಲಿಯೆ ಕೆಲಸದಲ್ಲಿ ನಿರತರಾಗಿದ್ದ ಅಮೀನರನ್ನು ಕರೆದು ''ನೀನು ಹೋಗಿ ಪೇಂಟಿಂಗ್ ಮಾಡಿ ಬರ್ತಿಯಾ'' ಎಂದರು. ಅಮೀನ ಮಾರುತ್ತರ ಕೊಡದೆ ಸುಮ್ಮನಾದಾಗ ''ಹೋಗು, ನೀನೀಗ ಎಲ್ಲ ತಿಳಿದುಕೊಂಡಿದ್ದಿಯಾ, ಹೋಗಿ ಪೇಂಟಿಂಗ್ ಮಾಡಿ ಬಾ, ಎಲ್ಲ ಸರಿಯಾಗ್ತದ'' ಎಂದರು.

ಗುರುಗಳ ಆಜ್ಞಾನುಸಾರ ಈಗ ಗುಳೇದಗುಡ್ಡಕ್ಕೆ ಕರಿನಂದಿಯವರ ಜೊತೆ ನಡೆದರು ಅಮೀನ. ಹೋಗಿ ಎಲ್ಲ ಪರದೆಗಳನ್ನು ನೋಡಿದರು. ಪೇಂಟಿಂಗ್ ತುಂಬ ಮಾಸಲಾಗಿದ್ದವು. ಬಣ್ಣ ಮಾಡುತ್ತ ನಡೆದರು. ಈ ಮೊದಲು ಇವುಗಳಿಗೆಲ್ಲ ಸೋನಾರ ಎಂಬವರು ಪೇಂಟಿಂಗ್ಸ್ ಮಾಡಿದ್ದರು. ಕೆಲವು ದಿವಸಗಳಲ್ಲಿ ಈ ಕೆಲಸ ಮುಗಿಯಿತು. ಕೆಲವು ಬೋರ್ಡಗಳನ್ನು ಬರೆದರು. ಕೆಲಸ ಚೆನ್ನಾಗಿ ನಿರ್ವಹಿಸಿದರೆಂದು ಎಲ್ಲರೂ ಅಭಿಪ್ರಾಯಪಟ್ಟರು. ಅಮೀನರನ್ನು ಅಲ್ಲಿಯ ಜನ ಒಳ್ಳೆಯ ಪೇಂಟರ ಎಂದು ಹೊಗಳಿದರು. ಇವರಿಗೆ ತುಂಬ ಆನಂದವಾಯಿತು. ಅಲ್ಲಿಂದ 'ಅಮೀನ ಪೇಂಟರ್' ಎಂಬುದೇ ಇವರಿಗೆ ರೂಢವಾಯಿತು. ಕೆಂಧೂಳಿಯವರು ಇವರು ಚೆನ್ನಾಗಿ ಕೆಲಸ ನಿರ್ವಹಿಸದ್ದಕ್ಕೆ ಆತ್ಮವಿಶ್ವಾಸ ಮೂಡಿಸಿಕೊಂಡು ಹೆಚ್ಚೆಚ್ಚು ಕೆಲಸ ಕೊಡುವದಲ್ಲದೆ ಪೇಂಟಿಂಗ್ ಕಲೆಯ ಕೌಶಲ್ಯಗಳನ್ನು ಬಿಡಿಬಿಡಿಸಿ ಹೇಳತೊಡಗಿದರು. ಇದರಿಂದಾಗಿ ವೃತ್ತಿ ರಂಗಭೂಮಿಯ ನಾಟಕ ಕಂಪನಿಗಳ ಸಂಖ್ಯೆ ಹೆಚ್ಚುತ್ತ ಬೆಳೆಯತೊಡಗಿತು. ಅದೇ ನಂಟಾಯಿತು, ಜೀವದ ಗಂಟಾಯಿತು.

## ಅಲ್ಲಲ್ಲಿ ಪೇಂಟಿಂಗ್ಸ್ ಮಾಡುತ್ತ

ಗುಳೇದಗುಡ್ಡದಲ್ಲಿ ಪೇಂಟಿಂಗ್ಸ್ ಮಾಡಿ ಬಂದ ಬಳಿಕ ಅಮೀನರಿಗೆ ಒಂದಿಷ್ಟು ಪ್ರಚಾರ ಸಿಕ್ಕಿತು. ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತಾರೆಂಬ ಖ್ಯಾತಿ ದೊರೆಯಿತು. ಸ್ವತಂತ್ರರಾಗಿ ನಾಟಕದ ಪರದೆಗಳಿಗೆ ಬಣ್ಣದಿಂದ ಜೀವ ತುಂಬಿ ಯಶಸ್ವಿಯಾಗತೊಡಗಿದರು. ಕೆಂಧೂಳಿಯವರ ಕಡೆ ಬರುತ್ತಿದ್ದ ನಾಟಕ ಕಂಪನಿ ಮಾಲಿಕರ ನಾಟಕಕ್ಕೆ ಬಾಡಿಗೆ ರೂಪದಲ್ಲಿ ವಸ್ತುಗಳನ್ನು ಕೊಡುವ ಮಾಲಿಕರನೇಕರ ಪರಿಚಯವಾಯಿತು. ಅವರೆಲ್ಲ ಇವರ ಕೆಲಸದ ಕುರಿತು ಸಂತೃಪ್ತಿ ವ್ಯಕ್ತಪಡಿಸತೊಡಗಿದರು. ಅಮೀನರು ಕೆಂಧೂಳಿಯವರ ಗರಡಿಯಲ್ಲಿ ಪಳಗಿ ಸಾಕಷ್ಟು ಕೆಲಸವನ್ನು ಮಾಡತೊಡಗಿದರು. ಹೀಗೆ ಇಲಕಲ್ಲಿನಲ್ಲಿ ಇರುತ್ತಿದ್ದಾಗ ಪೇಂಟಿಂಗ್ಸ್ ಕೆಲಸಕ್ಕೆ ಬೇರೆಡೆ ಹೋಗಬೇಕಾಗಿ ಬಂದ ಪ್ರಸಂಗಗಳು ಹಲವು.

ಆಲಮೇಲದಲ್ಲಿ ಉಪ್ಪಿನ ಗಂಗಾಧರಪ್ಪ ಎಂಬುವವರು ಬೇರೆ ಬೇರೆ ನಾಟಕ ಕಂಪನಿಗಳಿಗೆ ಬಾಡಿಗೆ ರೂಪದಲ್ಲಿ ಬೇಕಾಗುವ ವಸ್ತುಗಳನ್ನು ಕೊಡುವ ಮಾಲಿಕರಾಗಿದ್ದರು. ಅವರಲ್ಲಿರುವ ಸೆಟ್‌ಗಳಿಗೆ ಪರದೆಗಳಿಗೆ ಪೇಂಟ್ ಮಾಡಲು ಬಂದ ಕರೆಯ ಮೇರೆಗೆ ಆಲಮೇಲಕ್ಕೆ ಅಮೀನ ಹೋದರು. ಅಲ್ಲಿಯೇ ಕೆಲವು ದಿನಗಳ ಕಾಲ ನಿಂತು ಎಲ್ಲ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಒಪ್ಪಂದದ ಪ್ರಕಾರ ಗಂಗಾಧರಪ್ಪನವರು ಎರಡು ಸಾವಿರ ರೂ.ಗಳನ್ನು ಕೊಟ್ಟರು. ಇದರಲ್ಲಿ ಸಾವಿರ ರೂಪಾಯಿ ನೋಟೊಂದನ್ನು ಕಂಡ ಅಮೀನರು ಬೆರಗಾಗಿ ಎರಡು ಮೂರು ಬಾರಿ ತಿರುತಿರುವಿ ನೋಡಿದರು. ಆ ಮೌಲ್ಯದ ನೋಟೊಂದನ್ನು ಕಂಡದ್ದು ಪ್ರಥಮ ಬಾರಿಯಾದ್ದರಿಂದ ಬೆರಗಾಗಿಯೆ ಬಹಳಷ್ಟು ಭದ್ರವಾಗಿ ಅದನ್ನಿಟ್ಟುಕೊಂಡರು.

ಆಲಮೇಲದಿಂದ ಇಲಕಲ್ಲಿಗೆ ಬಂದ ಇವರು ಕೆಲವು ದಿನ ಕಳೆದ ಮೇಲೆ ಸುಳ್ಳದ ದೇಸಾಯಿಯವರ ಕಂಪನಿಯ ನಾಟಕದ ಪರದೆಗಳಿಗೆ ಪೇಂಟ್ ಮಾಡಲು ಕೆಂಥೂಳಿಯವರ ಸಲಹೆಯ ಮೇರೆಗೆ ಬದಾಮಿಗೆ ನಡೆದರು. ಅಲ್ಲಿಯ ಕೆಲಸ ಪೂರಯಿಸಿ ದಾವಣಗೆರೆಗೆ ಹೋಗಿ ಕೆಲವು ಸೆಟ್‌ಗಳಿಗೆ ಪೇಂಟಮಾಡಿದ್ದಲ್ಲದೆ ಹೊಸದೊಂದು ಪರದೆಯನ್ನು ತಾವೇ ಸ್ಕೆಚ್ ಹಾಕಿ ಚಿತ್ರಿಸಿ ಬಣ್ಣ ಮಾಡಿಕೊಟ್ಟರು. ಇದನ್ನು ಕಂಡ ದೇಸಾಯಿಯವರು ಆನಂದದಿಂದ ಅಭಿಮಾನದ ಮಾತುಗಳನ್ನು ಹೇಳಿದರು. ಅಮೀನರಿಗೆ ಈಗ ತಮ್ಮ ಪೇಂಟಿಂಗ್ಸ್ ಮೇಲೆ ದೃಢವಿಶ್ವಾಸ ಮೂಡತೊಡಗಿತು. ಇನ್ನೂ ಹೆಚ್ಚೆಚ್ಚು ಕಲಿಯಬೇಕೆಂಬ ಆಶೆಯು ಬೆಳೆಯತೊಡಗಿತು. ದಾವಣಗೆರೆಯಿಂದ ಬಂದ ನಂತರ ಮತ್ತೆ ಆಲಮೇಲಕ್ಕೆ ಹೋಗಬೇಕಾಗಿ ಬಂತು. ಈ ಸಲ ಅಲ್ಲಿ ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳಿಗೆ ಬೇಕಾಗುವ ವಸ್ತುಗಳನ್ನು ತಯಾರಿಸಿ ಬಣ್ಣ ಮಾಡುವ ಕೆಲಸ. ಕಿತ್ತೂರ ಚೆನ್ನಮ್ಮ, ಬೆಳವಡಿ ಮಲ್ಲಮ್ಮ ಮುಂತಾದ ನಾಟಕಗಳಿಗೆ ಬೇಕಾಗುವ ಪರದೆ ಹಾಗೂ ಪೂರಕ ವಸ್ತುಗಳನ್ನು ಶ್ರಮ ವಹಿಸಿ ಆಕರ್ಷಕ ರೀತಿಯಲ್ಲಿ ಪೂರಯಿಸಿ ಕೊಟ್ಟರು.

ಈಗ ಅಮೀನರೊಬ್ಬ ಒಳ್ಳೆಯ ಪೇಂಟರ್ ಎಂಬುದು ಎಲ್ಲೆಡೆ ಪ್ರಚಾರವಾಯಿತು. ಹಲವು ಮೂಲೆಗಳಿಂದ ಕೆಲಸಕ್ಕೆ ಆಹ್ವಾನಗಳು ಬರತೊಡಗಿದವು ಸಾಧ್ಯವಾದ ಕಡೆಗಳಲ್ಲೆಲ್ಲ ಪೇಂಟಿಂಗ್ಸ್ ಮಾಡುತ್ತ ನಡೆದರು. ಆದಾಯ ಹೆಚ್ಚಿತು. ಕ್ರಮೇಣ ಬದುಕಿನ ಬವಣೆಗಳು ದೂರವಾಗುತ್ತ ನಡೆದವು. ಬದುಕಿನ ಸಂಗಾತಿಯ ಕೈಹಿಡಿಯಬೇಕೆಂಬ ಆಶೆ ಚಿಗುರಿತು. ತಂದೆ ಹಾಗೂ ಮಾವನವರು ಕೂಡ ಇದನ್ನರಿತುಕೊಂಡು ಅಲ್ಲಲ್ಲಿ ಕನ್ಯೆಗಳನ್ನು ನೋಡಿದರು. ಕೊನೆಗೆ ಸಂಗಮದ ದಾವಲಬೀಯವರನ್ನು ಹಿರಿಯರು ಒಪ್ಪಿಕೊಂಡು ಮದುವೆಗೆ ತಯಾರಿ ಮಾಡಿದರು. (ಮದುವೆಯಾಗುವ ತನಕ ಅಮೀನರು ದಾವಲಬೀಯವರನ್ನು ನೋಡಿರಲಿಲ್ಲ.) ಇಸ್ಲಾಂ ಸಂಪ್ರದಾಯಕ್ಕೆ ಅನುಗುಣವಾಗಿ ಅಮೀನ ದಾವಲಬೀಯವರ ವಿವಾಹ ಇಳಕಲ್ಲಿನಲ್ಲಿ

ನೇರವೇರಿತು. ಕುಸುಮ-ಕಂಪು, ಸಕ್ಕರೆ-ಸಿಹಿ, ಚಿತ್ರ- ಚೆಲವು, ಶಬ್ದ-ಅರ್ಥ, ಪುರುಷ -ಪ್ರಕೃತಿಗಳು ಮೇಳಯಿಸಿದವು. ಅವರ ಬಾಳು ಕಂಡಿತು ಸುಖರಾಗ.

## ಉದಯವಾಯಿತು ಕೆ. ಎ. ಫೈನ್ ಆರ್ಟ್

ಮದುವೆಯಾದ ಹೊಸತರೊಳಗೆ ಅಮೀನ ತುಂಬ ಉಲ್ಲಸಿತರಾದರು. ಸಾಕಷ್ಟು ಕೆಲಸವನ್ನು ಹಾಗೆ ನೆರವೇರಿಸತೊಡಗಿದರು. ಒಂದು ಸೆಟ್ ನಿರ್ಮಿಸಿದರೆ ಚೆನ್ನ ಎಂದು ಮಾವ ಗೋಖರ್‌ಸಾಬರಲ್ಲಿ ಹೇಳಿದಾಗ ಒಳ್ಳೆಯ ವಿಚಾರವೆಂದು ಕಾರ್ಯತತ್ಪರರಾದರು. ಇಲಕಲ್ಲಿನಲ್ಲಿರುವ ಬನಶಂಕರಿ ಗುಡಿಯ ಸಮೀಪ ಶೆಡ್ ತಲೆ ಎತ್ತಿ ನಿಂತಿತು. ಅಮೀನರೀಗ ಅಲ್ಲಲ್ಲಿ ಕೆಲಸ ಮಾಡುವದು ಕಡಿಮೆ ಮಾಡಿ ಊರಲ್ಲಿದ್ದುಕೊಂಡೇ ಸ್ವತಂತ್ರರಾಗಿ ಪೇಂಟಿಂಗ್ಸ್ ಕಾರ್ಯ ಮಾಡುತ್ತ ನಡೆದರು. ಅನುಭವವಿರದ ಯಾವುದಾದರೂ ಕೆಲಸ ನಿರ್ವಹಿಸುವ ಪ್ರಸಂಗ ಬಂದರೆ ಗುರುಗಳಾದ ಕೆಂಧೂಳಿಯವರ ಹತ್ತಿರ ಹೋಗಿ ಸರಿಯಾದ ಮಾರ್ಗದರ್ಶನ ಪಡೆದು ಪೇಪರ್ ಮೇಲೆ ಚಿತ್ರಿಸಿಕೊಂಡು ಬರುತ್ತಿದ್ದರು. ಹಾಗೆ ತಂದ ಚಿತ್ರವನ್ನು ವಿಶಾಲವಾದ ಬಟ್ಟೆಯ ಮೇಲೆ ಸ್ಕೇಚ್ ಹಾಕಿ ಚಿತ್ರಿಸಿ ಬಣ್ಣ ತುಂಬಿ ಜೀವಕಳೆ ಬರುವಂತೆ ಚಿತ್ರಿಸುತ್ತಿದ್ದರು. ಹುಚ್ಚೇಶ್ವರ ನಾಟ್ಯ ಸಂಘ ಕಮತಗಿಯ ಮಾಲಿಕರಾದ ಭೀಮಣ್ಣ ಅರಿಷಿಣಗೋಡಿಯವರಿಗೊಮ್ಮೆ ಜರೂರವಾಗಿ ಕೆಲವು ನಾಟಕದ ಪರದೆಗಳು ಬೇಕಾಗಿದ್ದವು. ಈ ಸಂದರ್ಭದಲ್ಲಿ ಅಮೀನರು ಸ್ವತಂತ್ರವಾಗಿ ತಾವೇ ಸ್ಕೇಚ್ ಹಾಕಿಕೊಂಡು ಚಿತ್ರಿಸಿ ಬಣ್ಣ ಮಾಡಿದರು. ಚಿತ್ರದ ಪರದೆಗಳು ಜೀವಕಳೆಯೊಂದಿಗೆ ಮೆರುಗುಗೊಂಡವು. ಸ್ವತಂತ್ರವಾಗಿ ನಾಟಕದ ಪರದೆಗಳನ್ನು ರೂಪಿಸುವ ಶಕ್ತಿ ಇವರಲ್ಲಿ ಮೈಗೂಡಿತು. ನಾಟಕದ ಕಥೆ, ವರ್ಣನೆಗಳಿಗೆ ಅನುಸಾರವಾಗಿ ದೃಶ್ಯಗಳನ್ನು ಕಾಲ್ಪನಿಕವಾಗಿ ರೂಪಿಸಿಕೊಂಡು ಪರದೆಗಳನ್ನು ನಿರ್ಮಿಸುವ ಪ್ರೌಢಿಮೆ ಬೆಳೆಯಿತು. ಶೆಡ್ ನಿರ್ಮಿಸಿ ಎಂಟು ವರ್ಷಗಳು ಕಳೆಯುತ್ತ ಬಂದವು. ಅಮೀನರೀಗ ಉತ್ತರ ಕರ್ನಾಟಕದ ಪ್ರಮುಖ ಪೇಂಟರ್ ಎಂಬ ಖ್ಯಾತಿಗೆ ಪಾತ್ರರಾದರು.

ಇಲಕಲ್ಲ ಪುರಸಭೆಯ ಆ ವೇಳೆಯ ಅಧ್ಯಕ್ಷರಾಗಿದ್ದ ಮೇದಕೇರಿಯವರ ಸ್ವಂತ ಸ್ಥಳದಲ್ಲಿ ಅಮೀನ ಪೇಂಟರರ ಶೆಡ್ ಇದ್ದುದರಿಂದ ಅದನ್ನು ಸ್ಥಳಾಂತರಿಸಲು ಅವರು ಸೂಚಿಸಿದರು. ಅಲ್ಲದೆ ಪುರಸಭೆಯ ವತಿಯಿಂದ ಒಂದು ಸ್ಥಳವನ್ನು ನೀಡಿದರು. ಮೆದಕೇರಿಯವರ ಈ ಸಹಾಯವನ್ನು ಅಮೀನರು ತುಂಬ ನೆನೆಯುತ್ತಾರೆ. ಮೊದಲಿದ್ದ ಶೆಡ್ ಕಿತ್ತು ತಂದು ಹೊಸದಾಗಿ ದೊರಕಿದ ಸ್ಥಳದಲ್ಲಿ ಶೆಡ್ ಅಚ್ಚುಕಟ್ಟಾಗಿ ನಿರ್ಮಾಣಗೊಂಡಿತು. ಈ ಸೆಡ್‌ಗೆ ನಾಮಕರಣ ಮಾಡುವ ಆಲೋಚನೆಗೆ ಬಿದ್ದರು. ಮರುದಿನ ಉದಯವಾಯಿತು. ಕೆ. ಎ. ಫೈನ ಆರ್ಟ್ ಎಂಬ ಬೋರ್ಡು. ಅಮೀನರ ಕೆ.ಎ.ಫೈನ್ ಆರ್ಟ್ ಹೆಸರು ಎಲ್ಲೆಡೆ ಹರಡಿತು. ಈಗ ಪೇಂಟಿಂಗ್ಸ್ ಕೆಲಸಕ್ಕೆ ದೂರದೂರಿನವರು ಬರತೊಡಗಿದರು. ಕಂಪನಿಗಳಿಗಾಗಿ ಪರದೆಗಳ ಕೆಲಸವು ಹೆಚ್ಚಾಗುತ್ತ ನಡೆಯಿತು. ಕೆಲಸ ಮಾಡಲು ಕೈಗಳೆರಡು ಸಾಲದಾದವು.

## ಅಪ್ಪಿಕೊಂಡರು ಗುರುಗಳು

ಕೆಂಧೂಳಿ ಗುರುಗಳೆಂದರೆ ಅಮೀನರಿಗೆ ಪಂಚಪ್ರಾಣ. ಅವರಿಂದ ನಾನು ತುಂಬ ಕಲಿತ್ತಿದ್ದೇನೆಂಬ ಭಾವ ಅವರದು. ಪೇಂಟಿಂಗ್ಸ್ ವಿಷಯವಾಗಿ ಎಂಥ ಸಮಸ್ಯೆ ಬಂದರೂ ಕೆಂಧೂಳಿಯವರು ಅದನ್ನು ಸವಿವರವಾಗಿ ತಿಳಿಸಿಕೊಡುತ್ತಿದ್ದರು. ಗುರು ಶಿಷ್ಯರ ಅನ್ಯೋನ್ಯತೆ ದಿನದಿಂದ ದಿನಕ್ಕೆ ಹೆಚ್ಚುತ್ತ ನಡೆಯಿತು. ಒಮ್ಮೆ ಕೆಂಧೂಳಿಯವರ ಹತ್ತಿರ ರಾಯಪ್ಪ ಅರಿಷಿಣಗೋಡಿ(ಕಮತಗಿ)ಯವರು ಫ್ರೇಮ್, ಕೆಲಸಕ್ಕಾಗಿ ಅವಸರದಿಂದ ಬಂದಿದ್ದರು. ಕೆಂಧೂಳಿಯವರಿಗೆ ಬಿಡುವಿಲ್ಲ. ಶಿಷ್ಯ ಅಮೀನರನ್ನು ಕರೆಯಿಸಿದರು ರಾಯಪ್ಪನವರ ಕೆಲಸ ಮಾಡು ಎಂದು ಸ್ವತಃ ಆಜ್ಞಾಪಿಸಿದರು. ಗುರುಗಳು ಹೇಳಿದ ಈ ಕೆಲಸ ಅಮೀನರಿಗೆ ಒಂದಿಷ್ಟು ಹೊಸದು. ಅಂಜುತ್ತಲೆ ಒಪ್ಪಿದರು. ಇದರ ಕುರಿತು ವಿವರಗಳನ್ನೆಲ್ಲ ಕೇಳಿಕೊಂಡರು. ಕೆಂಧೂಳಿಯವರ ಮಾರ್ಗದರ್ಶನದಂತೆ ನಾಲ್ಕು ದಿವಸಗಳಲ್ಲಿ ಅಮೀನರು ಕೆಲಸ ಪೂರ್ಣ ಮಾಡಿ ಒಪ್ಪಿಸಿದರು. ಅರಿಷಿಣಗೋಡಿಯವರ ನಾಟಕ ಕಂಪನಿ ಈಗ ಬಳ್ಳಾರಿಯಲ್ಲಿ ಕ್ಯಾಂಪ್ ಮಾಡಿತ್ತು. ಅಲ್ಲಿ ಪ್ರದರ್ಶನ ಗೊಳ್ಳುತ್ತಿರುವ ನಾಟಕ ಯಶಸ್ವಿಯಾಗಿ ಓಡುತ್ತಲಿತ್ತು. ಈ ಖುಶಿಯೊಳಗೆ ಅರಿಷಿಣಗೋಡಿ ರಾಯಪ್ಪನವರು ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಿದರು. ಇಲ್ಲಿ ಸನ್ಮಾನಿತರಾಗುವವರು ಖೇಮರಾಜ ಕೆಂಧೂಳಿಯವರು ಹಾಗೂ ಕೆ. ಅಮೀನ ಪೇಂಟರ್‌ರು. ಗುರು ಶಿಷ್ಯರೀರ್ವರಿಗೂ ಶಾಲು ಹೊದಿಸಿ ಸನ್ಮಾನ ಮಾಡುವದರ ಜೊತೆಗೆ ಕೆಂಧೂಳಿಯವರಿಗೆ ಒಂದು ತೊಲೆ ಬಂಗಾರ ಹಾಗೂ ಅಮೀನರಿಗೆ ಅರ್ಧತೊಲೆ ಬಂಗಾರವನ್ನು ಕಾಣಿಕೆಯಾಗಿ ನೀಡಲಾಯಿತು. ಸನ್ಮಾನಕ್ಕೆ ಉತ್ತರ ರೂಪವಾಗಿ ಮಾತನಾಡುತ್ತ ಕೆಂಧೂಳಿಯವರು ಭಾವಾವೇಶಕ್ಕೆ ಒಳಗಾಗಿ ನಾನು ಅಮೀನನಂಥ ಶಿಷ್ಯನನ್ನು ಇಲ್ಲಿಯ ವರೆಗೆ ನೋಡಿಲ್ಲ, ಮುಂದೆ ನೋಡುತ್ತೇನೆಂಬ ಖಾತ್ರಿಯೂ ಇಲ್ಲ. ಆತನೆ ನನ್ನ ಮೊದಲ ಶಿಷ್ಯ ಹಾಗೂ ಕೊನೆಯ ಶಿಷ್ಯನು. ಹೌದೇನೋ ಎಂದು ನುಡಿದು ಮಾತನಾಡುವ ಹೊತ್ತಿನಲ್ಲಿಯೇ ಇವರನ್ನು ಕರೆದು ಅಪ್ಪಿಕೊಂಡರು. ಇದು ನಿಜವಾದ ಗುರು ಶಿಷ್ಯ ಸಂಬಂಧ ಎಂದು ಜನ ಅಭಿಮಾನದಿಂದ ಚಪ್ಪಾಳೆ ತಟ್ಟಿದರು. ಈ ವೇಳೆಯಲ್ಲಿ ಅಮೀನರಿಗೆ ಅರಿವಿಲ್ಲದಂತೆ ಆನಂದಭಾಷ್ಪ ಉದುರಿದವು.

## ದಾಟಲಿಲ್ಲ ಗುರುಗಳು ಹಾಕಿದ ಗೆರೆ

ಕೆಂಧೂಳಿಯವರಿಗೆ ನಾಟಕದ ಪರದೆಗಳಿಗೆ ಬಣ್ಣ ಮಾಡಲು ಶಕ್ತಿ ಸಾಲದಾಯಿತು. ವಯೋವೃದ್ಧರಾದ ಇವರು ತಮ್ಮೆಡೆ ಬಂದ ಕೆಲಸವನ್ನೆಲ್ಲ ಅಮೀನರಿಗೆ ಮಾಡಲು ಸೂಚಿಸುತ್ತಿದ್ದರು. ಬೇಕಾದಷ್ಟು ಕೆಲಸಗಳ ಒತ್ತಡವಿದ್ದರೂ ಕೆಂಧೂಳಿ ಗುರುಗಳು ಹಾಕಿದ ಗೆರೆ ದಾಟದಂತೆ ಕೆಲಸ ಪೂರಯಿಸುತ್ತಿದ್ದರು. ಇವರಿಬ್ಬರ ಸಂಬಂಧ ತುಂಬ ಗಾಢವಾಗುತ್ತ ನಡೆಯಿತು. ಅಮೀನರು ತಮ್ಮ ಆಗು ಹೋಗುಗಳನ್ನೆಲ್ಲ ಗುರುಗಳ

ಹತ್ತಿರ ತಿಳಿಸಿ ಸಲಹೆ ಸೂಚನೆಗಳನ್ನು ಪಡೆಯುತ್ತಿದ್ದರು. ಹೆಜ್ಜೆ ಇಡಬೇಕಾದರೆ ಮಾರ್ಗದರ್ಶನ ಬೇಕಾಗುತ್ತಿತ್ತು. ತಾವು ತಿಳಿದುಕೊಂಡ ಪೇಂಟಿಂಗ್ಸ್ ಕೌಶಲ್ಯಗಳನ್ನೆಲ್ಲ ಕೆಂಧೂಳಿಯವರು ಹೇಳಿದರು. ಅಮೀನರೀಗ ಕೆಂಧೂಳಿಯವರ ಪೇಂಟಿಂಗ್ಸ್‌ಗೆ ಸರಿಹೊಂದುವ ರೀತಿಯಲ್ಲಿ ಕೆಲಸ ಮಾಡತೊಡಗಿದರು. ಇದನ್ನು ಕಂಡು "ನಿನ್ನ ಕಲಾಶಕ್ತಿ ಇನ್ನೂ ಹೆಚ್ಚೆಚ್ಚು ಬೆಳೆಯಲಿ" ಎಂದು ಆಶೀರ್ವದಿಸುತ್ತಿದ್ದರು.

ಅಮೀನರ ಮೇಲೆ ಈಗ ದೊಡ್ಡ ಜವಾಬ್ದಾರಿ. ನಾಡಿನ ವೃತ್ತಿರಂಗಭೂಮಿ ಮಾಲಿಕರೆಲ್ಲ ಪರಿಚಿತರಾದರು. ಅನೇಕರು ವಿವಿಧ ಕೆಲಸ ಕಾರ್ಯಗಳಿಗೆ ಬಂದಾಗ ಯಾರಿಗೂ ಇಲ್ಲ ಎನ್ನದೇ ಎಲ್ಲವನ್ನೂ ನೀಟಾಗಿ ಕೆಲಸ ನಿರ್ವಹಿಸಿ ಕೊಡಬೇಕಾಗುತ್ತಿತ್ತು. ಕಂಪನಿ ನಾಟಕಗಳಿಗೆ ಪರದೆ ಮುಂತಾದವುಗಳನ್ನು ಬಾಡಿಗೆಗೆ ಕೊಡುವವರಂತೂ ಇವರಿಗೆ ಸಾಕಷ್ಟು ಕೆಲಸ ಕೊಡತೊಡಗಿದರು. ಆಲಮೇಲ, ಭಾಲ್ಕಿ, ಅವರಾದ, ಗುಲಬರ್ಗಾ, ಮುಧೋಳ, ಮಹಾಲಿಂಗಪೂರ, ದಾವಣಗೇರಿ, ಬೀದರ ಮುಂತಾದ ಕಡೆಯಿಂದ ಜನ ಬಂದು ನಿರಾಶರಾಗದೆ ಕೆಲಸ ನೋಡಿ ಖುಶಿಯಾಗಿ ಹೋಗುತ್ತಿದ್ದರು. ಅಮೀನರು ಆಯಾಸವಿಲ್ಲದಂತೆ ಕೆಲಸ ಮಾಡುತ್ತಿರುವದನ್ನು ಕಂಡು ಗುರುಗಳಾದ ಕೆಂಧೂಳಿಯವರು ಎಷ್ಟೋ ಸಲ ಬೆರಗಾಗಿದ್ದುಂಟು. ಇವರ ಕಲಾ ಕೌಶಲ್ಯ ಪ್ರೌಢತೆ ಕಂಡು ಒಳ್ಳೆಯ ರೀತಿಯಲ್ಲಿ ಬೆಳೆಯುತ್ತಿದ್ದೀ ಎಂದು ತಲೆದೂಗಿ ಹರಸುತ್ತಿದ್ದರು. 'ನರಗುಂದ ಬಂಡಾಯ' ನಾಟಕದ ಕಥಾ ಹಂದರಕ್ಕೆ ಹೊಂದುವ ಪರದೆಗಳು ಸುಳ್ಳದ ದೇಸಾಯಿಯವರಿಗೆ ಬೇಕಾಗಿದ್ದವು. ಅಮೀನರಲ್ಲಿಗೆ ಬಂದು ಈ ವಿಷಯ ತಿಳಿಸಿ, ನರಗುಂದಕ್ಕೆ ಹೋಗಿ ಅಲ್ಲಿರುವ ಕೋಟೆ ಮುಂತಾದ ದೃಶ್ಯಗಳ ಫೋಟೊ ತೆಗೆಸಿಕೊಂಡು ಬರೋಣ ಬನ್ನಿ ಎಂದು ಕರೆದುಕೊಂಡು ಹೋದರು ಅಮೀನರೊಮ್ಮೆ ನರಗುಂದದ ದೃಶ್ಯಗಳೆಲ್ಲವನ್ನು ಮನಸ್ಸಿನ ಕ್ಯಾಮರಾದಲ್ಲಿ ಅಚ್ಚೊತ್ತಿಕೊಂಡರು. ಯಾವ ಯಾವ ಫೋಟೋ ತೆಗೆಸಿದರೆ ಸರಿಯಾದೀತೆಂದು ಅಮೀನರಲ್ಲಿ ಕೇಳಿದಾಗ ಯಾವ ಫೋಟೋ ತೆಗೆಸುವದೂ ಬೇಡ. ನಿಮಗೆ ಎಂಥ ದೃಶ್ಯಗಳಿಗೆ ಪರದೆಗಳು ಬೇಕು ಹೇಳಿ, ತೆಗೆದುಕೊಡುವೆ ಎಂದು ಹೇಳಿ ಹಾಗೆಯೇ ಇಲಕಲ್ಲಿಗೆ ಮರಳಿದರು. ನಾಟಕದ ಕಥೆಯನ್ನೊಮ್ಮೆ ಓದಿ ಅದ್ಭುತವಾದ ರೀತಿಯಲ್ಲಿ ಕೆಲವು ಪರದೆಗಳನ್ನು ಚಿತ್ರಿಸಿಕೊಟ್ಟರು. ಸುಳ್ಳದ ದೇಸಾಯಿಯವರಿಗೆ ಹಿಡಿಸಲಾಗದ ಹಿಗ್ಗಾಯಿತು. ಕೆಂಧೂಳಿಯವರು ಇವುಗಳನ್ನು ಕಂಡು ಸಂತೋಷಪಟ್ಟು, ತಲೆದೂಗಿದರು. ನರಗುಂದದಲ್ಲಿ ಈ ನಾಟಕ ಪ್ರದರ್ಶನಗೊಳ್ಳುತ್ತಿದ್ದಾಗ ಬಹಳ ಜನ ಈ ಪರದೆಗಳನ್ನು ಕಂಡು ಮೂಕವಿಸ್ಮಿತರಾದದ್ದುಂಟು.

ಬೀದರ ಜಿಲ್ಲಾ ಖೇಳಗಾಂವ ಎಂಬ ಗ್ರಾಮದವರಿಗೆ ಅನುಭವ ಮಂಟಪದ ದೃಶ್ಯವೊಂದನ್ನು ಚಿತ್ರಿಸಿಕೊಡುವ ಪ್ರಸಂಗ ಬಂತು. ಅಮೀನರಿಗೆ ಒಂದಿಷ್ಟು ಇದು ಕಷ್ಟವೆನಿಸತೊಡಗಿತು. ಆಗ ಗುರುಗಳಾದ ಕೆಂಧೂಳಿಯವರಲ್ಲಿಗೆ ಹೋಗಿ ತಿಳಿಸಿದಾಗ ಈ ಕುರಿತು ಸಾಕಷ್ಟು ವಿವರ ನೀಡಿ ಔಟ್‌ಲೈನ್ ಹಾಕಿಕೊಟ್ಟರು. ಚಿತ್ರ ಬರೆಯುವ ಶಕ್ತಿ

ಈಗ ಕೆಂಧೂಳಿಯವರಲ್ಲಿರಲಿಲ್ಲ. ಒಂದಿಷ್ಟು ಅಂಜುತ್ತಲೇ ಇದನ್ನು ಚಿತ್ರಿಸಲು ಕುಳಿತು ಅಮೀನ ತನ್ಮಯರಾದರು. ಚಿತ್ರ ಸುಂದರವಾಗಿ ರೂಪುತಾಳಿತು. ಅಮೀನರಿಗೆ ಆಶ್ಚರ್ಯ. ನಾನು ಈ ಚಿತ್ರ ಬರೆದೆನೆ. ಹೇಗೆ ಈ ಚಿತ್ರ ಇಷ್ಟೊಂದು ವಿಶಿಷ್ಟ ರೀತಿಯಲ್ಲಿ ಜನ್ಮತಾಳಿತು, ಇದು ತಿಳಿಯದ ಮಾತೆಂದು ಮೌನಿಯಾದರು. ಕೆಂಧೂಳಿಯವರು ಇದನ್ನು ಕಂಡು ಬೆನ್ನು ಚಪ್ಪರಿಸಿದರು. ಅಮೀನರಿಗೆ ಗುರುಗಳು ಬೆನ್ನು ಚಪ್ಪರಿಸಿದ್ದು ಕಂಡು ಹೇಳಲು ಸಾಧ್ಯವಾಗದ ಆನಂದ. ನಾ ನಿಮ್ಮ ಗೆರೆ ದಾಟದಂತೆ ಕೆಲಸ ಮಾಡಿರುವೆ, ಎಲ್ಲವೂ ನಿಮ್ಮ ಪ್ರೇರಣೆ, ಮಾರ್ಗದರ್ಶನ ಹಾಗೂ ಆಶೀರ್ವಾದ ಎಂದು ವಿನೀತರಾಗಿ ನುಡಿಯುವ ಭಾವ ಅವರದು.

## ಬಿರುಕು ಬಿಟ್ಟಿತು ಸಾಂಸಾರಿಕ ಬದುಕೊಳಗೆ

ಪೇಂಟಿಂಗ್ಸ್ ಕೆಲಸ ಹೆಚ್ಚಾದಂತೆ ಮನೆಯ ಕಡೆಗೆ ಗಮನ ಕಡಿಮೆಯಾಯಿತು. ಕೆಲಸ ಕೆಲಸ ಎನ್ನುತ್ತ ಅಮೀನರು ಶೆಡ್‌ನೊಳಗೆ ಹೆಚ್ಚು ಹೊತ್ತು ಕಳೆಯುವದರಿಂದ ಸಾಂಸಾರಿಕ ಹಿಡಿತ ತಪ್ಪಿತು. ಗಂಡ ಹೆಂಡಿರಲ್ಲಿ ವೈಮನಸ್ಸು ಜಗಳ ಆರಂಭವಾದವು. ''ಬೆರೆತು ಬೆಳೆದರ ಬಾಳು ಇಲ್ಲಾದರೆ ಹಾಳು'' ಎಂಬ ಸ್ಥಿತಿ ನಿರ್ಮಾಣವಾಯಿತು. ಹೆಂಡತಿ ದಾವಲಬಿ ವಿನಾ ಕಾರಣ ಇವರ ಮೇಲೆ ಹರಿಹಾಯುವದು. ಸಿಟ್ಟು ಮಾಡಿಕೊಂಡು ಮಾತು ಬಿಡುವದು, ತವರುಮನೆಗೆ ಮೇಲಿಂದ ಮೇಲೆ ಹೋಗುವದು ನಡೆಯಿತು. ಇದನ್ನೆಲ್ಲ ಸಹಿಸಿಕೊಂಡ ಅಮೀನರು ಹೆಚ್ಚು ಮೌನವಾಗಿಯೇ ಇರುತ್ತಿದ್ದರು. ಆಗಲೇ ಎರಡು ಮಕ್ಕಳಾಗಿದ್ದವು ಬೇಬಿಜಾನ್, ಮಹಮ್ಮದ್ ಕೌಸರ್. ಸಾಂಸಾರಿಕ ಬದುಕು ಮೊದಲೆಷ್ಟು ಮುದ ನೀಡಿ ಅನ್ಯೋನ್ಯತೆ ಎನಿಸಿತ್ತೋ, ಅಷ್ಟೇ ಈಗ ಬೇಸರವಾಗತೊಡಗಿತು. ಮನಗಳು ಹೊಂದಿಕೆಯಿರದ ಮನೆಗೆ ಹೋಗುವದು ಬೇಡವೆನಿಸಿತು. ಗಂಡ ಹೆಂಡಿರ ದಿಕ್ಕುಗಳು ಬೇರೆಯಾದವು. ಇದನ್ನರಿತ ತಂದೆ ಬಾವಾಸಾಬರು ಹಾಗೂ ಮಾವ ಗೋಖರಸಾಬರು ದಂಪತಿಗಳೀರ್ವರಿಗೆ ಬುದ್ಧಿಯ ಮಾತುಗಳನ್ನು ಮನಕ್ಕೆ ಮುಟ್ಟುವಂತೆ ಹೇಳಿದರು.ಇಬ್ಬರಲ್ಲಿ ಸಾಮರಸ್ಯ ಕುದುರುವಂತೆ ಒಪ್ಪಂದ ಮಾಡಿಸಿದರು. ಈಗ ಅಮೀನ ದಾವಲಬೀ ದಂಪತಿಗಳು ಒಂದಾದರು. ಆದರೆ ಮೊದಲಿನ ಸಾಮರಸ್ಯ ಮೂಡಲಿಲ್ಲ. ಬಿರುಕುಗಳಿಗೆ ತೇಪಹಚ್ಚಿ ಕೆಲವು ವರ್ಷಗಳ ಕಾಲ ಸಂಸಾರದ ರಥ ಸಾಗಿತು. ಮತ್ತೆರಡು ಮಕ್ಕಳಾದವು ಫರಿದಾ, ಸಹರಾಬೇಗಂ) ಮತ್ತೊಮ್ಮೆ ಸಂಸಾರದಲ್ಲಿ ಬಿರುಕು ಬಿಟ್ಟಿತು. ಕಂದಕ ಸ್ವರೂಪ ನಿರ್ಮಾಣಗೊಂಡಿತು. ಬೇಸತ್ತ ಅಮೀನರು ದಾವಲಬೀಯವರ ಸಂಗ ತೊರೆಯಬೇಕೆಂದು ನಿರ್ಧರಿಸಿ ಬಿಟ್ಟರು. ಹೆಂಡತಿಯ ವೈರುದ್ಧ ವರ್ತನೆಗಳಿಂದ ಘಾಸಿಗೊಂಡಿದ್ದ ಇವರ ಮನಕ್ಕೆ ಗಂಗಾ ಎಂಬ ವ್ಯಕ್ತಿ ರಂಗಭೂಮಿಯ ನಟಿಯೊಬ್ಬಳು ತಂಪೆರೆದಳು. ಅಮೀನ ಗಂಗಾ ಜೋಡಿಜೀವಗಳಾಗಿ ಇಲಕಲ್ಲಿನಲ್ಲಿಯೇ ಇರತೊಡಗಿದರು. ಇನ್ನು ದಾವಲಬಿ ಅಮೀನರ

ಜೊತೆ ಕೂಡಿಕೊಳ್ಳುವದು ಕನಸಿನ ಮಾತಾಯಿತು. ಈ ಸಲ ಹಿರಿಯರಾರೂ ಒಪ್ಪಂದಕ್ಕೆ ಬರಲಿಲ್ಲ. 'ಡೈವರ್ಸ್' ಆಗುವವದರೊಂದಿಗೆ ಇಬ್ಬರ ದಿಕ್ಕುಗಳು ಬೇರೆ ಬೇರೆಯಾದವು.

## ಬೆಳೆಯುವ ಹಂಬಲದೊಂದಿಗೆ ಬೆಂಗಳೂರಿಗೆ

ಪ್ರಸಿದ್ಧ ಜಾನಪದ ಗಾಯಕ ಗುರುರಾಜ ಹೊಸಕೋಟಿಯವರ ಕಾರ್ಯಕ್ರಮವನ್ನು ಇಲಕಲ್ಲಿನಲ್ಲಿ ಏರ್ಪಡಿಸಲಾಗಿತ್ತು. ಈ ನಿಮಿತ್ತ ಅವರು ಇಲಕಲ್ಲಿಗೆ ಬಂದಿದ್ದರು. ಕಾರ್ಯಕ್ರಮ ತುಂಬ ಯಶಸ್ವಿಯಾಯಿತು. ಮರುದಿವಸ ಅಮೀನ ಮತ್ತು ಹೋಸಕೋಟಿಯವರ ಸಮಾಗಮವಾಯಿತು. ಅಮೀನರ ಪೇಂಟಿಂಗ್ಸ್ ಕೆಲಸದ ಕುರಿತು ಹೃದಯ ತುಂಬಿ ಮಾತನಾಡಿದರು. ಉತ್ತರ ಕರ್ನಾಟಕದ ಶ್ರೇಷ್ಠ ಕಲಾವಿದ ಎಂದು ಹೊಗಳಿದರು. ''ನಿಮ್ಮಂಥವರು ಇಲ್ಲಿರುವದಕ್ಕಿಂತ ಬೆಂಗಳೂರಿನಲ್ಲಿದ್ದರೆ ಚೆನ್ನ. ವೈವಿಧ್ಯಮಯ ಕೆಲಸಗಳು, ಕೈತುಂಬುವಷ್ಟು ಕಾಸು, ಎಲ್ಲೆಲ್ಲೂ ಪ್ರಚಾರ ಸಿಗುತ್ತದೆ ಹೀಗೆ ಏನೆಲ್ಲ ಹೇಳಿದರು. ಆಯ್ತು, ನೋಡುವೆ, ಬರುವದಾದರೆ ತಮಗೆ ಪತ್ರಮುಖೇನ ತಿಳಿಸಿ ಬರುವೆ ಎಂದು ಹೇಳಿದರು ಅಮೀನ. ಹೊಸಕೋಟಿಯವರು ಬೆಂಗಳೂರಿಗೆ ಹೋದ ನಂತರ ಅಮೀನರಲ್ಲಿ ಬೆಂಗಳೂರಿನ ಕುರಿತು ಹಲವು ಕನಸುಗಳು ಅರಳಲು ಆರಂಭಿಸಿದವು. ಆದರೆ ಹೋಗಲಾಗಲಿಲ್ಲ. ಹೀಗೆಯೇ ಮೂರು ನಾಲ್ಕು ತಿಂಗಳು ಗತಿಸಿದವು. ಮತ್ತೊಮ್ಮೆ ಹೊಸಕೋಟಿಯವರು ಬೇರೊಂದು ಕೆಲಸ ಕಾರಣವಾಗಿ ಇಲಕಲ್ಲಿಗೆ ಬಂದರು. ಮತ್ತೆ ಇಬ್ಬರ ಸಮಾಗಮವಾಯಿತು. ಮೊದಲು ಹೇಳಿದ ವಿಚಾರಗಳನ್ನೇ ಹೊಸಕೋಟಿಯವರು ನೆನಪಿಸಿಕೊಟ್ಟರು.ಈ ಸಲ ಅಮೀನರು ಆಯ್ತು ಬರುವೆ ಎಂದು ಒಪ್ಪಿಕೊಂಡಿದ್ದಲ್ಲದೆ ಬರುವ ದಿನವನ್ನು ತಿಳಿಸಿದರು.

ಅಮೀನರು ಗಂಗಾಳೊಂದಿಗೆ ಬೆಂಗಳೂರಿಗೆ ಹೋಗಲು ನಿರ್ಧರಿಸಿ. ಕೆ.ಎ.ಫೈನ್ ಆರ್ಟ್‌ನ್ನು ತಾತ್ಕಾಲಿಕವಾಗಿ ಶಿಷ್ಯ ಸಿದ್ದರಾಮ ಕಾಂಬಳೆಗೆ ಒಪ್ಪಿಸಿದರು. (ಮರಳಿ ಕೊಡುವ ಕರಾರಿನ ಮೇರೆಗೆ) ಇದ್ದಕ್ಕಿದಂತೆ ಹೆಚ್ಚು ಪ್ರಚಾರ ಮಾಡದೆ ಅಮೀನರು ಗಂಗಾಳನ್ನು ಜೊತೆಗೆ ಕರೆದುಕೊಂಡು ಬೆಂಗಳೂರಿಗೆ ನಡೆದರು. ಬೆಂಗಳೂರಿನ ಹನುಮಂತನಗರದಲ್ಲಿರುವ ಹೊಸಕೋಟಿಯವರ ಮನೆಯಲ್ಲಿ ಕೆಲವು ದಿವಸ ತಂಗಿದರು. ಹೊಸಕೋಟಿಯವರೆ ಮುಂದಾಗಿ ತಮ್ಮ ಮನೆಯ ಸಮೀಪದಲ್ಲಿಯೇ ಚಿಕ್ಕ ಮನೆಯೊಂದನ್ನು ಅಮೀನರಿಗೆ ಬಾಡಿಗೆರೂಪದಲ್ಲಿ ಕೊಡಿಸಿದರು. ಗಂಗಾಳೊಂದಿಗೆ ಅಮೀನ ಅಲ್ಲಿ ವಾಸವಾಗತೊಡಗಿದರು. ಹೊಸಕೋಟಿಯವರ ಜೊತೆ ಕೂಡಿಕೊಂಡು ಅಮೀನರು ಕೆಲಸಕ್ಕಾಗಿ ಲಹರಿ ಕ್ಯಾಸೆಟ್, ಸಂಗೀತಾ ಕ್ಯಾಸೆಟ್ ಕಂಪನಿ ಮುಂತಾದ ಕಡೆ ಅಲೆದಾಡಿದರು. ಯಾವ ಕೆಲಸವೂ ದೊರೆಯಲಿಲ್ಲ. ಕ್ರಮೇಣ ಹೊಸಕೋಟಿಯವರು ಹಿಂಜರಿಯತೊಡಗಿದರು. ಇದರಿಂದ ಅಮೀನರಿಗೆ ಒಂದಿಷ್ಟು ಆಘಾತವಾಯಿತು. ಹೊಸಕೋಟಿಯವರು ನನ್ನನ್ನು ವಿನಾ ಕಾರಣ ಸಂಕಟಕ್ಕೆ ಸಿಲುಕಿಸಿದರೆಂದು ನೊಂದರು.

ಒಬ್ಬರೆ ಬೆಂಗಳೂರಿನ ಬೇರೆ ಬೇರೆ ಕಡೆ ಕೆಲಸಕ್ಕೆ ತಿರುಗಾಡಿದರು. ಕೆಲಸ ದೊರೆಯಲಿಲ್ಲ. ಆದರೂ ಅನ್ವೇಷಣೆ ಬಿಡಲಿಲ್ಲ. ಕೈಯಲ್ಲಿ ತಾವು ಪೇಂಟಿಂಗ್ಸ್ ಮಾಡಿರುವ ನಾಟಕದ ಪರದೆಗಳ ಫೋಟೋ ಅಲ್ಬಮನ್ನು ಹಿಡಿದುಕೊಂಡು ಅಲ್ಲಲ್ಲಿ ತಿರುಗಾಡತೊಡಗಿದರು. ಒಂದು ದಿವಸ ಅಲ್ಬಮ್‌ನೊಂದಿಗೆ ಹನುಮಂತನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಕುಳಿತ್ತಿದ್ದಾಗ ಅರ್ಚಕರು ಇವರನ್ನು ವಿಚಾರಿಸಿದರು. ಅಲ್ಬಮ್‌ನ್ನು ನೋಡಿದರು, ಒಳ್ಳೆಯ ಕಲಾವಿದರಿದ್ದೀರೆಂದು ಹೇಳಿದರು. ಅಷ್ಟೆ ಅಲ್ಲ ನಮ್ಮ ಮಠದಲ್ಲಿ ಕೆಲವು ಚಿತ್ರಗಳನ್ನು ಚಿತ್ರಿಸಬೇಕಾಗಿದೆ, ಚಿತ್ರಿಸುವಿರಾ ಎಂದರು. ಅಮೀನರಿಗೆ ಕುರುಡನಿಗೆ ಕಣ್ಣು ಬಂದಷ್ಟು ಸಂತಸವಾಯ್ತು. ಆಯ್ತು ಆಚಾರ್ಯರೆ, ತಾವು ತಿಳಿಸಿದ ಚಿತ್ರಗಳನ್ನು ಬರೆಯುವೆ. ಆಚಾರ್ಯರಾಗ ಇವರನ್ನು ಕುರಿತು, ''ತಾವು ಮುಸ್ಲಿಂ ಎಂಬುದು ಗೊತ್ತಾಗಬಾರದು, ಅದಕ್ಕಾಗಿ ನಿಮ್ಮ ಹೆಸರನ್ನು ಅಮೀನ ಬದಲಾಗಿ 'ಅಮರ' ಎಂದು ಬರೆಯಬೇಕು'' ಕೇಳಿದವರಿಗೆ ಹಾಗೆಯೇ ಹೇಳಬೇಕು, ಇಲ್ಲವಾದರೆ ನಿಮಗೆ ಕೆಲಸ ಕೊಟ್ಟಿದ್ದಕ್ಕೆ ಜನ ನನ್ನನ್ನು ಏನೇನೋ ಮಾತನಾಡಿಕೊಳ್ಳುತ್ತಾರೆ. ಅದಕ್ಕೆ ಅಮೀನರು ಅಮರ ಆಗಲು ಒಪ್ಪಿಕೊಂಡು ಕೆಲಸವನ್ನು ಕೈಗೆತ್ತಿಕೊಂಡರು. ರಾಮ, ಕೃಷ್ಣ, ಹನುಮಂತ, ರಾಘವೇಂದ್ರ ರಾಯರು ಮುಂತಾದ ದೇವತೆಗಳ ಚಿತ್ರಗಳನ್ನು ಆಕರ್ಷಕವಾಗಿ ಅಮರ ಹೆಸರಿನೊಂದಿಗೆ ಚಿತ್ರಿಸಿದರು. ಮಠಕ್ಕೆ ಬರುವ ಭಕ್ತರೆಲ್ಲ ಕಂಡು ಹೊಗಳಿಕೆಯ ಮಾತುಗಳನ್ನಾಡಿದರು. ಅಲ್ಲದೆ ಅಮೀನರಿಗೆ ಈಗ ಬೇರೆ ಬೇರೆ ಚಿಕ್ಕಪುಟ್ಟ ಕೆಲಸಗಳು ದೊರಕತೊಡಗಿದವು. ರಾಘವೇಂದ್ರ ಸ್ವಾಮಿ ಮಠದ ಆಚಾರ್ಯರು ಅನೇಕರನ್ನು ಪರಿಚಯಿಸಿದರು. ಬೇರೆ ಬೇರೆ ದೇವಾಲಯಗಳಲ್ಲಿ ಪೇಂಟಿಂಗ್ಸ್ ಕೆಲಸವನ್ನು ಕೊಡಿಸಿದರು. ಮತ್ತೆ ಅಮೀನರೀಗ ಬಿಡುವಿಲ್ಲದ ಕೆಲಸಗಾರರಾಗಿ ದುಡಿಯತೊಡಗಿದರು. ಬೆಂಗಳೂರಿನ ಬದುಕು ಮೊದಲು ಬೇಸರ ತಂದರೂ ಕ್ರಮೇಣ ಹೊಂದಿಕೊಂಡರು.

## ಡಾ. ರಾಜಕುಮಾರರ ಸಂಪರ್ಕ

ಅಮೀನರಿಗೆ ಬೆಂಗಳೂರಿನ ಬದುಕು ಒಂದಿಷ್ಟು ಹಿಡಿಸಿತು. ಏನಾದರೂ ಸಾಧಿಸಬೇಕೆಂಬ ಹಂಬಲ, ಒಳ್ಳೆಯ ಕಲಾವಿದನಾಗಿ ಬೆಳೆಯುವ ಆಶೆ ಹೆಚ್ಚು ಚಿಗುರತೊಡಗಿದವು. ಕುತೂಹಲದಿಂದ ಎಲ್ಲವನ್ನು ನೋಡುವ ಕೇಳುವ ಇವರ ಸ್ವಭಾವಕ್ಕೆ ಅನೇಕರು ಸ್ಪಂದಿಸಿದರು. ಬಿಡುವಿಲ್ಲದ ಕೆಲಸವಿದ್ದರೂ ಆದಾಯ ಮಾತ್ರ ಹೇಳಿಕೊಳ್ಳುವಂತಿರಲಿಲ್ಲ, ಅಷ್ಟಕಷ್ಟೆ. ಸಂಸಾರ ಸುರಳೀತ ಸಾಗಿದರೆ ಸಾಕೆಂದು ಅಮೀನ ಭಾವಿಸಿದರು. ಕೆಲಸ ಎಲ್ಲೆಲ್ಲಿ ಮಾಡುತ್ತಿದ್ದರೋ ಎಲ್ಲಾ ಕಡೆಗೂ ಹೌದೆನಿಸಿಕೊಂಡರು. ರಾಘವೇಂದ್ರಸ್ವಾಮಿ ಮಠದ ಅರ್ಚಕರು ಬೆಂಗಳೂರಿನ ಬೇರೆ ಬೇರೆ ಬಡಾವಣೆಗಳಲ್ಲಿರುವ ಮಠಗಳ ಪೇಂಟಿಂಗ್ಸ್ ಕೆಲಸವನ್ನು ನಿರ್ವಹಿಸಲು ತಿಳಿಸಿದಾಗ ಅಮೀನ ಸಂತೋಷದಿಂದ ಒಪ್ಪಿಕೊಂಡರು. ಬೇರೊಂದು ಬಡಾವಣೆಯ ಮಠದಲ್ಲಿ ಕೆಲಸ

ನಿರ್ವಹಿಸುತ್ತಿದ್ದಾಗ ಹನುಮಂತ ನಗರದ ರಾಘವೇಂದ್ರ ಸ್ವಾಮೀ ಮಠಕ್ಕೆ ಕರ್ನಾಟಕ ರತ್ನ ಡಾ ರಾಜಕುಮಾರ ಬಂದರು. ಸ್ವಾಮಿಯ ದರ್ಶನವಾದ ನಂತರ ಅತ್ತಿತ್ತ ಕಣ್ಣಾಡಿಸುತ್ತ ಅಮೀನರು ಚಿತ್ರಿಸಿದ ವೈವಿಧ್ಯಮಯ ದೇವತೆಗಳ ಚಿತ್ರಗಳನ್ನು ಕಂಡು ಆನಂದಿಸಿದರು.ಅಲ್ಲದೆ ಅರ್ಚಕರಿಗೆ ಇವುಗಳನ್ನು ಚಿತ್ರಿಸಿದವರಾರು ಎಂದು ಪ್ರಶ್ನಿಸಿದರು. ಅಮೀನರ ಕುರಿತು ಅರ್ಚಕರು ತಿಳಿಸಿದಾಗ ಒಳ್ಳೆಯ ಕಲಾವಿದರು, ತುಂಬ ಅಚ್ಚುಕಟ್ಟಾಗಿ ಜೀವಕಳೆ ಬರುವಂತೆ ಚಿತ್ರಿಸಿದ್ದಾರೆ. ಅವರನ್ನೊಮ್ಮೆ ನಾನು ಕಾಣಬೇಕು, ಯಾವಾಗ ಸಿಗುತ್ತಾರವರು ಯಾರನ್ನಾದರು ಕಳಿಸಿಕೊಡುವೆ, ಅವರೊಂದಿಗೆ ಕಳುಹಿಸಿ, ಎಂದೆಲ್ಲ ಹೇಳಿದರು. ಯಾವತ್ತಿನಂತೆ ಅಮೀನರು ಮರುದಿವಸ ಕೆಲಸಕ್ಕೆ ಹೊರಡುವ ಮುನ್ನ ರಾಘವೇಂದ್ರ ಸ್ವಾಮಿ ಮಠಕ್ಕೆ ಆಗಮಿಸಿದರು. ಅರ್ಚಕರು ಡಾ.ರಾಜಕುಮಾರ ತಮ್ಮನ್ನು ಕಾಣಲು ಅಪೇಕ್ಷಿಸಿದ್ದಾರೆಂದರು. ಹೌದಾ, ಅಪರಿಮಿತ ಆನಂದ ಅಮೀನರಿಗೆ. ಅವರ ಮನೆಯ ವಿಳಾಸ ಕೊಡಿ ನಾನೇ ಹೋಗುವೆ. ಇಲ್ಲಿ ಅವರು ಯಾರನ್ನಾದರೂ ಕಳುಹಿಸುತ್ತೇನೆಂದಿದ್ದಾರೆ, ಇದೇ ಸಮಯ ಹೇಳಿದ್ದೇನೆ, ಯಾರಾದರೂ ಬರಬಹುದು, ಸ್ವಲ್ಪ ಹೊತ್ತು ಕಾಯೋಣ ಇಲ್ಲದಿದ್ದರೆ ಹೋಗುವಿರಂತೆ ಎಂದರು. ಸ್ವಲ್ಪ ಹೊತ್ತು ಕಾಯುವಷ್ಟರಲ್ಲಿ ಕಲಾಕೌಸ್ತುಭ ಪತ್ರಿಕೆಯ ಫೋಟೋಗ್ರಾಫರ ಇವರನ್ನು ಡಾ. ರಾಜ್ ಬಳಿ ಕರೆದೊಯ್ಯಲು ಬಂದರು. ಡಾ.ರಾಜ್‌ರನ್ನು ಕಂಡ ಅಮೀನರ ಮನದೊಳಗೆ ಅಭಿಮಾನ ಆನಂದಗಳೆರಡು ಮೇಳಯಿಸಿದವು. ಗೌರವಪೂರ್ಣ ನಮಸ್ಕಾರ ಹೇಳಿದರು. ರಾಜ್‌ರು ಕೂಡ ಅಷ್ಟೆ, ಅಮೀನರ ಕಲೆ ಕುರಿತು ಮೆಚ್ಚುಗೆ ಮಾತುಗಳನ್ನಾಡಿದರು. ಒಳ್ಳೆಯ ಕಲಾವಿದರೆಂದು ಹೊಗಳಿದರು. ತಮ್ಮ ಚಿತ್ರಕಲಾಭ್ಯಾಸ ಯಾರಲ್ಲಿ ಆಗಿದೆ ಎಂದು ಪ್ರಶ್ನಿಸಿದರು. ಖೇಮರಾಜ ಕೆಂಧೂಳಿ ಗುರುಗಳ ಹತ್ತಿರವೆಂದು ಅಮೀನರ ಉತ್ತರ. ಕೆಂಧೂಳಿಯುವರನ್ನು ನಾನು ಬಲ್ಲೆ. ನಾವು ಬಾಗಲಕೋಟೆಗೆ ನಾಟಕವಾಡಲು (ಶಾಂತಿನಿವಾಸ) ಇತ್ಯಾದಿ ಬಂದಿದ್ದಾಗ ಅವರನ್ನು ಕಂಡ ನೆನಪು. ಅವರು ಪೇಂಟಿಂಗ್ ಮಾಡಿದ ಪರದೆಗಳಂತೂ ತುಂಬ ಜೀವಂತಿಕೆಯಿಂದ ಇರುತ್ತಿದ್ದವು, ದೊಡ್ಡ ಕಲಾವಿದರು, ಹೀಗೆ ರಾಜಕುಮಾರರು ಕೆಂಧೂಳಿಯವರ ಕುರಿತು ಒಳ್ಳೆಯ ಮಾತುಗಳನ್ನು ಹೇಳಿದಾಗ ಅಮೀನರಿಗೆ ಅವೆಲ್ಲ ಆಪ್ಯಾಯಮಾನವೆನಿಸಿದವು.

ಡಾ.ರಾಜಕುಮಾರರು ಅಮೀನರಿಗೆ ತಾವು ಕೃಷ್ಣದೇವರಾಯ ಪಾತ್ರದಲ್ಲಿರುವ ಐದು ಅಡಿ ಎತ್ತರದ ಫೋಟೊವೊಂದನ್ನು ತಯಾರಿಸಿ ಕೊಡಲು ಹೇಳಿದರು. ಅಮೀನರು ಅದನ್ನು ಕುಂದಿಲ್ಲದಂತೆ ಚಿತ್ರಿಸಿದರು. ಅದನ್ನು ಡಾ.ರಾಜ್ ಅವರ ಮನೆಯಲ್ಲಿ ಇಂದಿಗೂ ಕಾಣಬಹುದು. ನೃಪತುಂಗ ಐತಿಹಾಸಿಕ ಕಥೆಗೆ ತಕ್ಕಂತೆ ಕೆಲವು ಚಿತ್ರಗಳನ್ನು ಬರೆದರು. ಇವೆಲ್ಲವನ್ನು ಕಂಡ ರಾಜಕುಮಾರರ ಪರಿವಾರದವರು ಅಮೀನರಿಗೆ ಕೆಲಸಕ್ಕೆ ತಕ್ಕ ಸಂಭಾವನೆ ಕೊಡುವದರೊಂದಿಗೆ ಕಾಣಿಕೆಯಾಗಿ ವಸ್ತುವೊಂದನ್ನು ಕೊಟ್ಟರು.

ಡಾ.ರಾಜಕುಮಾರರ ಸಂಪರ್ಕದಲ್ಲಿ ಅಮೀನ ಇನ್ನೂ ಕೆಲ ಕೆಲಸಗಳನ್ನು ಮಾಡಿ ಪೂರೈಸಿದರು. ಆಗಾಗ ಬರುತ್ತಾ ಇರಿ, ನಮ್ಮಲ್ಲಿ ಯಾವತ್ತು ಕೆಲಸಗಳು ಇದ್ದೇ ಇರುತ್ತವೆಂದು ರಾಜ ತಿಳಿಸಿದರು. ಆದರೆ ಅಮೀನರು ಇತ್ತ ಕಡೆಗೆ ಕೆಲಸಗಳು ಹೆಚ್ಚಾಗಿದ್ದುದರಿಂದ ಆ ಕಡೆ ಹೋಗಲಿಲ್ಲ, ಮತ್ತೆ ಸಂಪರ್ಕ ಸಾಧಿಸಲಿಲ್ಲ.

## ತಮಿಳು ಕಲಾವಿದರ ಜೊತೆಗೆ

ಬೆಂಗಳೂರಿನ ಬೇರೆ ಬೇರೆ ಕಡೆಗೆ ಅಮೀನರು ಕೆಲಸ ಮಾಡುತ್ತಿದ್ದಾಗ ಕೆಲವು ತಮಿಳು ಕಲಾವಿದರ ಸಂಪರ್ಕ ಸೇತು ಕುದುರಿತು.ಅದರಲ್ಲಿ ಮುರಳಿ ಎನ್ನುವವರೊಬ್ಬರು. ಮುರಳಿ ಅಮೀನರನ್ನು ತುಂಬಾ ಆತ್ಮೀಯವಾಗಿ ಅನೇಕರನ್ನು ಪರಿಚಯಿಸಿದರು. ಬೇರೆ ಬೇರೆ ಏಜನ್ಸಿಗಳ ಕಡೆಯಿಂದ ಕೆಲಸವನ್ನು ಕೊಡಿಸಿದರು. ಈ ಏಜನ್ಸಿಗಳು ಅಮೀನರಿಗೆ ಪೇಂಟಿಂಗ್ಸ್ ಕೆಲಸ ಕೊಟ್ಟು ಅವರ ಮೇಲೆ ಯಾವ ಹೆಸರೂ ನಮೂದಾಗಬಾರದೆಂದು ಸೂಚಿಸಿದರು. ಇವರು ಅಮೀನರ ಕಡೆಯಿಂದ ವೈವಿಧ್ಯಮಯ ಪೇಂಟಿಂಗ್ಸ್ ಕೆಲಸ ಮಾಡಿಸಿಕೊಂಡು ಪ್ರತಿಯೊಂದಕ್ಕೆ ಒಂದು ಸಾವಿರ ಇಲ್ಲವೇ ಒಂದೂವರೆ ಸಾವಿರದಷ್ಟು ಹಣಕೊಡುತ್ತಿದ್ದರು. ಇವುಗಳನ್ನು ಪಡೆದ ಏಜನ್ಸಿಗಳು ಅವುಗಳಿಗೆ ಫ್ರೇಮ್ ಸ್ವರೂಪ ನೀಡಿ ತಮ್ಮ ಹೆಸರನ್ನು ನಮೂದಿಸಿ ಮದ್ರಾಸಕ್ಕೆ ಅವುಗಳನ್ನು ಒಯ್ದು ಹತ್ತರಿಂದ ಹದಿನೈದು ಸಾವಿರ ರೂಪಾಯಿಗಳಿಗೊಂದರಂತೆ ಮಾರುತ್ತಿದ್ದರು. ಇದರಲ್ಲಿ ಮುರಳಿಗೆ ತುಂಬ ಕಮೀಶನ್ ಸಿಗುತ್ತಿತ್ತು. ಅಷ್ಟೆಲ್ಲ ಕೆಲಸಗಳ ಮಧ್ಯದಲ್ಲಿ ಅಮೀನರು ಇರುತ್ತಿದ್ದರೂ ಮುರಳಿ ಏಜನ್ಸಿಗಳ ಕೆಲಸ ಮಾಡಲು ಬಹಳ ಪ್ರೀತಿಯಿಂದಲೇ ಇವರನ್ನೂ ತೊಡಗಿಸುತ್ತಿದ್ದುದುಂಟು. ಬ್ಯಾನರ್ಸ್ ಏಜನ್ಸಿಗಳಲ್ಲೂ ಅಮೀನ ಕೆಲಸ ಮಾಡಿದರು. ಅಲ್ಲದೆ 'ಅಮ್ಮಾ' ಎಂಬ ತಮಿಳು ಚಲನಚಿತ್ರಕ್ಕೆ ಬೇಕಾಗುವ ಪೂರಕ ವಸ್ತುಗಳಿಗೆ ಪೇಂಟಿಂಗ್ಸ್ ಮಾಡಿದ ಹಿರಿಮೆ ಅಮೀನರದು. ಇದೇ ವೇಳೆಯಲ್ಲಿ ಕ್ಯಾಲೆಂಡರ್ಸ್ ಪೇಂಟಿಂಗ್ಸ್ ಕೆಲಸವನ್ನು ಮಾಡಿದರು. ಇವರು ಚಿತ್ರಿಸುವ ಪೇಂಟಿಂಗ್ಸ್‌ಗಳಿಗೆ ಬೇಡಿಕೆ ಹೆಚ್ಚಾದಂತೆ ಅಮೀನರ ಸಂಭಾವನೆ ಹೆಚ್ಚಾಗಲಿಲ್ಲ. ಆದರೆ ಏಜನ್ಸಿಗಳು ಹೆಚ್ಚು ಹಣ ಗಳಿಸತೊಡಗಿದವು. ಇದರಿಂದಾಗಿ ಅಮೀನರನ್ನು ತಮಿಳು ಕಲಾವಿದರು ಹಾಗೂ ಏಜನ್ಸಿಗಳು ತುಂಬ ಗೌರವದಿಂದ ಕಾಣತೊಡಗಿದರು.

## ದೆಹಲಿಯ ಚಿತ್ರಕಲಾ ಪ್ರದರ್ಶನದಲ್ಲಿ

ದೆಹಲಿಯಲ್ಲಿ ಚಿತ್ರಕಲಾ ಪ್ರದರ್ಶನವೊಂದನ್ನು ಶ್ರೀನಿವಾಸ ಎನ್ನುವವರು ಹೋಟೆಲ್ ಒಂದರ ಸಭಾಭವನದಲ್ಲಿ ಏರ್ಪಡಿಸಿದ್ದರು. ಬೇರೆ ಬೇರೆ ಗೆಳೆಯರೊಂದಿಗೆ ಅಲ್ಲಿ ಭಾಗವಹಿಸಲು ಅಮೀನರು ತೆರಳಿದರು. ಬೇರೆ ಬೇರೆ ರಾಜ್ಯದವರು ಕೂಡ ಅದರಲ್ಲಿ ಇದ್ದರೂ ತಮಿಳರ ಸಂಖ್ಯೆಯೇ ಸಿಂಹಪಾಲು. ಕರ್ನಾಟಕದ ಪರವಾಗಿ

ಅಮೀನರೊಬ್ಬರೆ. ಅಮೀನರಲ್ಲಿ ಕರ್ನಾಟಕ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಪ್ರತಿಬಿಂಬಗಳಾದ ವಿಜಾಪುರದ ಗೋಳಗುಮ್ಮಟ, ಬೇಲೂರಿನ ಶಿಲಾಬಾಲಿಕೆ, ಜೋಗದ ಜಲಪಾತ, ಮೈಸೂರು ಅರಮನೆ ಮುಂತಾದವುಗಳನ್ನು ಚಿತ್ರಿಸಿ ಪ್ರದರ್ಶನದಲ್ಲಿಟ್ಟಿದ್ದರು. ಅಲ್ಲಿ ಪ್ರದರ್ಶನಗೊಳ್ಳುವ ಚಿತ್ರಗಳಲ್ಲೆಲ್ಲ ಅಮೀನರು ಚಿತ್ರಿಸಿದ ಗೋಳಗುಮ್ಮಟದ ಚಿತ್ರ ಬೃಹತ್ತಾಕಾರದ್ದಾಗಿತ್ತು. ಸೌಂದರ್ಯಪೂರ್ಣವೂ ಆಗಿತ್ತು. ಬಂದವರ ಗಮನವನ್ನೆಲ್ಲ ಅದು ಸೆಳೆಯುತ್ತಿತ್ತು. ಶ್ರೇಷ್ಠ ಕಲಾವಿದ ಎಂ. ಎಫ್. ಹುಸೇನರು ಈ ಚಿತ್ರಕಲಾ ಪ್ರದರ್ಶನ ನಡೆದ ಸ್ಥಳಕ್ಕೆ ಆಗಮಿಸಿ ಎಲ್ಲ ಕಲಾವಿದರೊಂದಿಗೆ ಬಹಳ ಹೊತ್ತು ಕಳೆದರು. ಅವರು ಕಲೆಯ ಕುರಿತಾಗಿ ಮಾತನಾಡುತ್ತ ನಮ್ಮ ಅಂತರಂಗವನ್ನು ಹೊರಗೆಡಹುವ ಶಕ್ತಿ ಅದು, ಜಡವು ಚೇತನವಾಗುತ್ತದೆ. ಕಲೆಯಿಂದ ನಮ್ಮ ಅಂತಃಕರಣ ಮೀಟಿ ಸತ್ಯ ಸೌಂದರ್ಯಗಳಿಗೆ ಇಂಬು ಕೊಡುತ್ತದೆ. ಇದರ ಆರಾಧಕ ತನ್ನತನ ಬಿಟ್ಟುಕೊಡದೆ ಅದ್ಭುತವಾದದ್ದನ್ನು ಸಾಧಿಸಬೇಕು. ಪ್ರದರ್ಶನ ಸ್ಪರ್ಧೆ ಕೀರ್ತಿಗಾಗಿ ಬಳಸದೆ ಔಚಿತ್ಯಪೂರ್ಣ ಸೇವೆಗೂ ಕಲಾಶಕ್ತಿ ಉಪಯೋಗಿಸಬೇಕು, ಎಂದೆಲ್ಲ ಮಾತುಗಳನ್ನು ತಿಳಿಸುವದರ ಜೊತೆಗೆ ಸಮಕಾಲೀನ ಚಿತ್ರಕಲೆ ಕುರಿತು ಮಾಡರ್ನ್ ಪೇಂಟಿಂಗ್ಸ್ ಕುರಿತು ತಮ್ಮದೇ ಆದ ಅಭಿಪ್ರಾಯಗಳನ್ನು ಅಭಿವ್ಯಕ್ತಪಡಿಸಿದರು. ನಮ್ಮ ಪೇಂಟಿಂಗ್ಸ್ ಜನಸಾಮಾನ್ಯರನ್ನು ಮುಟ್ಟಿದಾಗಲೇ ಅದು ಸಾರ್ಥಕತೆ ಹೊಂದುತ್ತದೆ ಎಂಬ ಕಿವಿಮಾತನ್ನು ಕಲಾವಿದರಿಗೆ ಹೇಳಲು ಮರೆಯಲಿಲ್ಲ. ಅಮೀನರ ಗೋಳಗುಮ್ಮಟ ಚಿತ್ರವನ್ನು ಹುಸೇನರು ನೋಡಿ ಮೆಚಿಕೊಂಡು ಪರಿಣಾಮಕಾರಿ ಪೇಂಟಿಂಗ್ಸ್ ಎಂದರು. ಮಾಜಿ ಪ್ರಧಾನಿ ದೇವೇಗೌಡರು ಕೂಡ ಈ ಚಿತ್ರಕಲಾ ಪ್ರದರ್ಶನದ ಸ್ಥಳಕ್ಕೆ ಭೇಟಿಕೊಟ್ಟರು. ಕಲಾವಿದರಿಗೆ ಅಭಿಮಾನಪೂರ್ವಕ ಕೆಲವಿಚಾರಗಳನ್ನು ತಿಳಿಸಿದರು. ಅಲ್ಲದೆ ದೆಹಲಿಯ ಪ್ರೇಕ್ಷಣೀಯ ಸ್ಥಳಗಳನ್ನು ಕಲಾವಿದರೆಲ್ಲ ನೋಡುವ ಏರ್ಪಾಡು ಮಾಡಿದರು. ಕಲಾವಿದರಿಗೆ ನನ್ನ ಸಹಾಯ ಸಹಕಾರ ಯಾವತ್ತೂ ಇದೆ ಎಂದೆಲ್ಲ ತಿಳಿಸಿದರು. ದೆಹಲಿಯ ಚಿತ್ರಕಲಾ ಪ್ರದರ್ಶನ ಮುಗಿದ ಬಳಿಕ ನಾಲ್ಕು ದಿವಸಗಳ ಕಾಲ ಅಮೀನರು ಹಾಗೂ ತಮಿಳು ಕಲಾವಿದ ಗೆಳೆಯರು,ಅಲ್ಲಿಯೇ ಇದ್ದುಕೊಂಡು ಪ್ರೇಕ್ಷಣೀಯ ಸ್ಥಳಗಳನ್ನೆಲ್ಲ ನೋಡಿಕೊಂಡು ಬೆಂಗಳೂರಿಗೆ ಮರಳಿದರು. ಬೆಂಗಳೂರಿಗೆ ಬಂದರೂ ದೆಹಲಿಯ ನೆನಪುಗಳು, ಹುಸೇನರ ಮಾತುಗಳು, ದೇವೇಗೌಡರ ಸಹಾಯ ಮನೋಭಾವ, ಇವುಗಳನ್ನು ಅಮೀನರು ಮನದೊಳಗೆ ಆಗಾಗ ಮೆಲಕು ಹಾಕುತ್ತಲೇ ಇದ್ದರು.

## ಬೆಂಗಳೂರು ಬದುಕು ಬೇಸರವೆನಿಸಿತು

ಅಮೀನರು ಸಂಗಾತಿ ಗಂಗಾಳೊಂದಿಗೆ ಬದುಕು ಸಾಗಿಸುತ್ತ, ಪೇಂಟಿಂಗ್ಸ್‌ಗಳನ್ನು ಮಾಡುತ್ತಾ ತಕ್ಕಮಟ್ಟಿನ ರೀತಿಯಲ್ಲಿದ್ದಾಗ ಗಂಗಾಳಿಗೆ ಅಶಕ್ತತೆ ಕಾರಣವಾಗಿ

ಪಾರ್ಶ್ವವಾಯು ಆಯಿತು. ಅಮೀನರಿಗೆ ಈ ಘಟನೆ ಧೃತಿಗೆಡಿಸಿತು. ಅವಳ ಆಗು ಹೋಗುಗಳನ್ನೆಲ್ಲ ನೋಡಿಕೊಳ್ಳುತ್ತ ಉಪಚರಿಸುತ್ತ ಪೇಂಟಿಂಗ್ಸ್ ಮಾಡುವದು ದುರ್ಲಭವಾಗತೊಡಗಿತು. ಮನೆಗೆಲಸವನ್ನೆಲ್ಲ ಅಮೀನರೇ ಮಾಡಬೇಕಾಗಿ ಬಂತು. ಸಹಾಯಕ್ಕೆ ಯಾರೂ ಬರಲಿಲ್ಲ. ಆಸ್ಪತ್ರೆಗೆ ತೋರಿಸಿದರು. ಯಾವ ಪರಿಣಾಮವೂ ಆಗಲಿಲ್ಲ. ಗಂಗಾ ತನ್ನನ್ನು ತವರು ಮನೆ ಬಳ್ಳಾರಿಗೆ ಬಿಟ್ಟುಬರಲು ಸೂಚಿಸಿದಳು. ಅಮೀನರಿಗೂ ಇದೂ ಸರಿಯೆನಿಸಿತು. ಗಂಗಾಳನ್ನು ಬಳ್ಳಾರಿಗೆ ಕರೆದುಕೊಂಡು ಹೋದ ಅಮೀನರು ಅವಳ ಸಹೋದರರ ಮನೆಯಲ್ಲಿ ಬಿಟ್ಟು ಭಾರವಾದ ಮನಸ್ಸಿನಿಂದ ಬೆಂಗಳೂರಿಗೆ ಮರಳಿದರು. ಗಂಗಾ ಅಮೀನರ ಬಾಳಲ್ಲಿ ತಂಗಾಳಿಯಾಗಿ ತುಂಬಿದವಳು. ಎಂದೂ ಇವರಿಬ್ಬರ ಮಧ್ಯದಲ್ಲಿ ವೈಮನಸ್ಸು ಉಂಟಾಗಲಿಲ್ಲ. ಅವಳೊಂದಿಗೆ ಬಾಳಿದ ಪ್ರೀತಿಯ ದಿನಗಳನ್ನು ನೆನೆದು ದುಃಖಿಸಿದ್ದುಂಟು. ಗಂಗಾಳ ಸಹೋದರರು ಅವಳನ್ನು ಪ್ರೀತಿಯಿಂದ ಉಪಚರಿಸಿದರು. ಯಾವ ಪ್ರಯೋಜನವಾಗಲಿಲ್ಲ. ಒಂದು ತಿಂಗಳ ನಂತರ ತೀರಿದಳು. ಇವಳು ತೀರಿದ ಸುದ್ದಿ ಅಮೀನರಿಗೆ ಬಹಳ ದಿನ ತಿಳಿಯಲಿಲ್ಲ. ಈ ಕಾರಣ ಅವಳನ್ನು ಮತ್ತೊಮ್ಮೆ ಕಾಣುವ ಭಾಗ್ಯ ಅಮೀನರಿಗೆ ಬರಲಿಲ್ಲ. ಮುಂದೆ ಆ ಕಡೆಯ ಸಂಬಂಧಗಳೆಲ್ಲ ಕಳಚಿಹೋದವು.

ಆಗ ಅಮೀನರೊಬ್ಬರೇ ಬೆಂಗಳೂರಿನಲ್ಲಿ ಇರಬೇಕಾಗಿ ಬಂತು. ತಮಿಳು ಗೆಳೆಯರೊಂದಿಗೆಯೇ ಹೆಚ್ಚು ಕಾಲ ನೂಕುತ್ತಿದ್ದರು. ಇವರಿಗೆ ಅವರು ಮಾಡುವ ಅನ್ಯಾಯ ಕ್ರಮೇಣ ತಿಳಿಯತೊಡಗಿತು. ಇವರ ಪೇಂಟಿಂಗ್ಸ್‌ಗಳಿಂದ ಅವರಿಗೆ ತುಂಬಾ ಆದಾಯ, ಇವರಿಗೆ ಜೀವನ ಸಾಗಿಸಲು ಅಷ್ಟಕ್ಕಷ್ಟೇ ಹಣ. ಅವರ ಕುರಿತಾಗಿದ್ದ ಪ್ರೀತಿ, ಆತ್ಮೀಯತೆ ಕ್ರಮೇಣ ಕಡಿಮೆಯಾಯಿತು. ಅಷ್ಟೆ ಅಲ್ಲ, ಬೆಂಗಳೂರಿನ ಬದುಕೇ ಬೇಸರವೆನಿಸತೊಡಗಿತು. ತಮಿಳರ ಸಹವಾಸ ಕ್ರಮೇಣ ಕಡಿಮೆ ಮಾಡತೊಡಗಿದರು. ಈ ಸಂದರ್ಭದಲ್ಲಿ ವಾರ್ತಾ ಮತ್ತು ಪ್ರಚಾರ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ತಿಕೋಟಾದ ಪಾಟೀಲರ ಪರಿಚಯವಾಯಿತು. ಅವರು ಕೂಡ ತಮಿಳರು ಮಾಡುವ ಅನ್ಯಾಯ ಕೇಳಿ ಆ ಕಡೆ ನೀವು ಹೋಗುವುದೇ ಬೇಡ, ಬೇರೆಡೆ ಕೆಲಸ ಕೊಡಿಸುವೆ ಎಂದು ತಿಳಿಸಿ ಕ್ಯಾಲೆಂಡರ್ ಎಜನ್ಸಿಗಳಾಗಿದ್ದ ಶ್ಯಾಮಸುಂದರ ಶೇಡಜಿಯವರನ್ನು ಪರಿಚಯಿಸಿದರು. ಶೇಡಜಿಯವರ ಹೇಳಿಕೆಯಂತೆ ಅಮೀನರು ರಾಮ, ಕೃಷ್ಣ, ರಾಘವೇಂದ್ರ, ವೆಂಕಟೇಶ್ವರ, ಲಕ್ಷ್ಮೀ ಸರಸ್ವತಿ, ಗಣಪತಿ, ಹನುಮಂತ ಮುಂತಾದ ದೇವತೆಗಳ ಚಿತ್ರಗಳನ್ನು ಚಿತ್ರಿಸಿದರು. ಈ ಕೆಲಸದಿಂದ ತಕ್ಕಮಟ್ಟಿಗೆ ಆದಾಯ ಬಂದಿತು. ಏಕಾಂಗಿಯಾಗಿ ಮನೆಯ ಕೆಲಸಗಳನ್ನೆಲ್ಲ ಪೂರೈಸಿ ಪೇಂಟಿಂಗ್ಸ್ ಕೆಲಸಗಳನ್ನು ಮಾಡತೊಡಗಿದಾಗ ಇಲಕಲ್ಲಿನಿಂದ ಸಹೋದರ 'ಮೀಯಾ ' ಬೆಂಗಳೂರಿಗೆ ಬಂದರು. ಅಣ್ಣನೊಂದಿಗೆ ಎರಡು ಮೂರು ದಿವಸ ಇದ್ದು ''ಯಾಕೆ ಇಷ್ಟೆಲ್ಲಾ ಕಷ್ಟ, ಬೆಂಗಳೂರಿಗೆ ಬಂದು ಅಂಥಾ ಮಹಾ ಸುಖವೇನು ಕಂಡಿದ್ದೀ ಹೇಳು, ನಮ್ಮೆಲ್ಲರೊಟ್ಟಿಗೆ ಇರುವೆಯಂತೆ,

ಇಲಕಲ್ಲಿಗೆ ಬಂದು ಬಿಡು'' ಎಂದೆಲ್ಲಾ ಅಂತಃಕರಣ ಪೂರ್ವಕವಾಗಿ ಹೇಳಿ ಹೋದರು. ಈ ಮಾತುಗಳಿಗೆ ಅಮೀನರು ಏನೊಂದೂ ಪ್ರತಿಕ್ರಿಯೆ ಕೊಡದೇ ಸುಮ್ಮನಾದರು. ಮುಂದೆ ಒಂದೆರಡು ತಿಂಗಳು ಕಳೆದವು. ಅಲ್ಲಿಯ ಬದುಕು ಬೇಸರವೆನಿಸತೊಡಗಿತು. ಸಹಾಯ ಸಹಕಾರ ನೀಡಿದವರಿಗೆಲ್ಲ ಕೃತಜ್ಞತೆಗಳನ್ನು ತಿಳಿಸಿ ಇಲಕಲ್ಲಿಗೆ ಪ್ರಯಾಣ ಬೆಳೆಸಿದರು.

## ಮತ್ತೆ ಇಲಕಲ್ಲಿನಲ್ಲಿ

ಇಲಕಲ್ಲಿಗೆ ಬಂದ ಅಮೀನ ಪೇಂಟರರು ಚೇತೋಹಾರಿಯಾದರು. ಇಲ್ಲಿದ್ದುಕೊಂಡೇ ವಿಶೇಷ ಕೆಲಸ ಮಾಡಬೇಕೆಂದುಕೊಂಡು ಕಾರ್ಯಪ್ರವೃತ್ತರಾದರು. ಬೆಂಗಳೂರಿಗೆ ಹೋಗುವಾಗ ಶಿಷ್ಯ ಸಿದ್ಧರಾಮ ಕಾಂಬಳೆಗೆ ವಹಿಸಿಕೊಟ್ಟಿದ್ದ ಕೆ.ಎ.ಫೈನ ಆರ್ಟ್‌ನ್ನು ತಮ್ಮ ವಶಕ್ಕೆ ಪಡೆದುಕೊಂಡರು. ತಮಗೆ ಮೊದಲು ಪೇಂಟಿಂಗ್ಸ್ ಕೆಲಸ ಕೊಡುತ್ತಿದ್ದ ವೃತ್ತಿ ರಂಗಭೂಮಿಯ ನಾಟಕ ಕಂಪನಿಯ ಮಾಲಿಕರನ್ನು, ಬಾಡಿಗೆ ರೂಪದಲ್ಲಿ ವಸ್ತುಗಳನ್ನು ನೀಡುತ್ತಿದ್ದ ಒಡೆಯರನ್ನು, ಅನೇಕ ಕಲಾವಿದರನ್ನು, ಸಂಘಟಕರನ್ನು ವಿಶೇಷ ಕಾರ್ಯಕ್ರಮವೊಂದನ್ನು ಏರ್ಪಡಿಸಿ ಇಲಕಲ್ಲಿಗೆ ಕರೆಸಿಕೊಂಡರು. ತಮ್ಮ ಬೆಂಗಳೂರು ಬದುಕಿನ ಕಥೆಯನ್ನೆಲ್ಲ ಅವರ ಮುಂದೆ ಅಮೀನರು ಬಿಚ್ಚಿಟ್ಟರು. ಇನ್ನು ಎಲ್ಲಿಯೂ ಹೋಗುವುದಿಲ್ಲ. ತಾವೆಲ್ಲ ಮೊದಲು ನೀಡುತ್ತಿದ್ದ ಸಹಕಾರ ನೀಡಬೇಕೆಂದು, ಪೇಂಟಿಂಗ್ಸ್ ಕೆಲಸ ಕೊಡಬೇಕೆಂದು ವಿನಂತಿಸಿದರು. ಕರೆಗೆ ಬಹುಪಾಲು ಜನ ಸಮ್ಮತಿಸಿದ್ದಲ್ಲದೆ, ಕೆಲಸವನ್ನು ನೀಡಿದರು. ಮತ್ತೆ ಇಲಕಲ್ಲಿನಲ್ಲಿ ಅಮೀನ ಪೇಂಟರ್‌ರ ಪೇಂಟಿಂಗ್ಸ್ ಕೆಲಸ ನಡೆಯಿತು. ಸಂಗಮೇಶ್ವರ ನಾಟ್ಯ ಸಂಘ ಗುಡಗೇರಿ, ಹುಚ್ಚೇಶ್ವರ ನಾಟ್ಯ ಸಂಘ ಕಮತಗಿ, ಕೆ.ಬಿ.ಆರ್. ಡ್ರಾಮಾ ಕಂಪನಿ, ಚಿತ್ತರಗಿ ಕಂಪನಿ, ಖಾಸ್ಗತೇಶ್ವರ ನಾಟ್ಯ ಸಂಘ ತಾಳಿಕೋಟಿ ಮುಂತಾದವರೆಲ್ಲ ಅಮೀನರಿಗೆ ಬಣ್ಣದ ಪರದೆಗಳನ್ನು ತಯಾರಿಸಲು ತಿಳಿಸಿದರು. ಮೊದಲಿಗಿಂತ ಸಾಕಷ್ಟು ಪ್ರೌಢತೆಯನ್ನು ಪೇಂಟಿಂಗ್ಸ್‌ನಲ್ಲಿ ಸಾಧಿಸಿದ್ದ ಅಮೀನರು ಹೌದೆನ್ನುವಂತೆ ಅವುಗಳನ್ನು ಚಿತ್ರಿಸಿ ನೀಡಿದರು. ಬಿಡುವಿಲ್ಲದಂತೆ ಪೇಂಟಿಂಗ್ಸ್ ಮಾಡುವುದು ಮತ್ತೆ ನಡೆಯಿತು. ಇಂದಿಗೂ ಈ ಕೊಂಡಿ ಭದ್ರ. ಇದುವೇ ಅವರ ಬದುಕಿಗೆ ಆಧಾರ.

ಸ್ನೇಹ ರಂಗದ ಧ್ರುವರಾಜ ದೇಶಪಾಂಡೆಯವರ ಸಂಪರ್ಕ ಬಂದು ಇಬ್ಬರೂ ಆತ್ಮೀಯ ಗೆಳೆಯರಾದರು. ಅಮೀನರು ಸ್ನೇಹ ರಂಗದ ಆಜೀವ ಸದಸ್ಯರಾಗಿ ಅದರ ಚಟುವಟಿಕೆಗಳಿಗೆಲ್ಲ ಬೆನ್ನೆಲುಬಾಗಿ ನಿಂತರು. ಇದರಿಂದಾಗಿ ಹವ್ಯಾಸಿ ರಂಗದತ್ತವೂ ಅಮೀನರಿಗೆ ಒಲವು ಉಂಟಾಯಿತು. ಹವ್ಯಾಸಿ ನಾಟಕಗಳಿಗೂ ಸೆಟ್ ವರ್ಕ್ಸ್‌ಗಳನ್ನು ಮಾಡತೊಡಗಿದರು. ಸ್ನೇಹರಂಗದ ಚಟುವಟಿಕೆಗಳಲ್ಲಿ ಇಂದು ತಮ್ಮನ್ನು ತೊಡಗಿಸಿಕೊಂಡು ದುಡಿಯುತ್ತಿರುವ ವಂಶಾಕೃತಮಠ, ಗಜೇಂದ್ರಗಡ ಮುದ್ದಣ್ಣ,

ಪಾಟೀಲ ಬಸವರಾಜ ಎಲ್ಲರೂ ಗೆಳೆಯರು ಇವರೊಂದಿಗೆ ಅಮೀನರು ಸ್ನೇಹರಂಗದ ಏಳ್ಗಿಗೆ ಇಂದು ಕೈಜೋಡಿಸುತ್ತಿದ್ದಾರೆ.

## ಮರುಮದುವೆ

ತಮ್ಮನ್ನು ರಂಗಭೂಮಿಯ ಚಟುವಟಿಕೆಗಳೊಂದಿಗೆ ಪರ್ಯಾಯವಾಗಿ ತೊಡಗಿಸಿಕೊಂಡ ಅಮೀನ ಪೇಂಟರರು ಸದಾ ಕೆಲಸದಲ್ಲಿ ತೊಡಗಿದರು. ಹೊರೆಯಾಗುವಷ್ಟು ಕೆಲಸ ಎದುರಿದ್ದಾಗ ಮತ್ತಾವುದರ ಚಿಂತೆ. ಸಾಂಸಾರಿಕ ಬದುಕೆಂದರೆ ನಿರ್ಲಿಪ್ತ ಭಾವ. ತಂದೆ ಹಾಗೂ ಸಹೋದರರ ಹತ್ತಿರ ಯಾವತ್ತಿನ ತಮ್ಮ ಪೇಂಟಿಂಗ್ಸ್ ಕೆಲಸದೊಂದಿಗೆ ಇರುತ್ತಿದ್ದಾಗ ಸಾಂಸಾರಿಕ ವಿಚಾರವಾಗಿ ತಂದೆ ಮತ್ತೆ ಮಾತೆತ್ತಿದರು. ''ಡೈವರ್ಸ್ ಆದರೇನಾತು, ದಾವಲಬಿ ಮಕ್ಕಳೊಂದಿಗೆ ಕಷ್ಟಪಡುತ್ತ ಒಂಟಿಯಾಗಿದ್ದಾಳೆ, ನೀವಿಬ್ಬರೂ ಮತ್ತೆ ಒಂದಾದರೆ ನನಗೆ ಬಹಳ ಸಂತೋಷ'' ಎಂದರು.ಅಮೀನರಿಗೆ ಈ ಮಾತು ಕೇಳಿದ ಕೂಡಲೇ ದಿಗ್ಭ್ರಮೆಯಾಯಿತು. ಮತ್ತೆ ಅವಳ ಜೊತೆ ಸಂಸಾರ ಆಗದ ಮಾತು, ಇನ್ನೊಮ್ಮೆ ಈ ವಿಚಾರ ಎತ್ತಬೇಡಿ ಎಂದು ತಿಳಿಸಿದರು. ಬಾವಾಸಾಬರು ಮೌನವಾದರು. ಈ ವಿಚಾರದ ಕುರಿತು ಅಮೀನರಲ್ಲಿ ಅನೇಕ ಹಿರಿಯರು, ಗೆಳೆಯರು ಬೇಕಾದಷ್ಟು ತಿಳಿಸಿ ಹೇಳಿದರು. ಅಮೀನರು ಇದೊಂದು ಸಾಧ್ಯವಾಗದ ಮಾತು, ತಾವೆಲ್ಲ ನನ್ನನ್ನು ಏನಾದರೆಂದುಕೊಳ್ಳಿ, ಅವಳೊಂದಿಗೆ ಮತ್ತೆ ಕೂಡಲಾರೆ ಎಂಬ ಅಚಲ ನಿರ್ಧಾರ ತಿಳಿಸಿದರು. ಒಂದು ಮಾಡಬೇಕೆಂಬ ಹಿರಿಯರ ಹಂಬಲ ಹುಸಿಯಾಯಿತು. ಕೆಲವು ದಿವಸಗಳು ಕಳೆದವು. ಸ್ನೇಹರಂಗದ ಗೆಳೆಯರು ಅಮೀನರಿಗೆ ಮರುಮದುವೆಯ ಕುರಿತು ವಿಚಾರಿಸಿದರು.ಇದಕ್ಕೂ ಮೊದಮೊದಲು ಒಪ್ಪದ ಅಮೀನರು ಮತ್ತೆ ಮತ್ತೆ ಗೆಳೆಯರು ಕೇಳತೊಡಗಿದಾಗ ತಮ್ಮೊಳಗೆ ತಾವೇ ಈ ಕುರಿತು ವಿಚಾರಿಸಿ ಮರುಮದುವೆಗೆ ಒಪ್ಪಿಗೆ ಸೂಚಿಸಿದರು. ಅಮೀನ ಪೇಂಟರ್‌ರ ಎರಡನೆಯ ಮದುವೆ ಬಿಜಾಪೂರ ತಾಲೂಕಿನ ಕನ್ನೂರ ಗ್ರಾಮದ 'ರಿಜವಾನ್' ಎಂಬ ಹೆಣ್ಣುಮಗಳ ಜೊತೆ ಅತ್ಯಂತ ಸರಳ ರೀತಿಯಲ್ಲಿ ನಡೆಯಿತು. ಮತ್ತೆ ಅಮೀನ ಪೇಂಟರ್ ಸಂಸಾರದ ಬಂಧನದೊಳಗೆ ಸಿಲುಕಿದರು. ಈ ದಂಪತಿಗಳೀರ್ವರ ಬದುಕಿಂದು ಸಂತೃಪ್ತಿದಾಯಕ. ರಬ್ಬಾನಿ, ಶಬನಮ್ ಎಂಬ ಮಕ್ಕಳು ಜನಿಸಿದ್ದಾರೆ. ಪರಸ್ಪರ ಹೊಂದಾಣಿಕೆಯ ಸಾಂಸಾರಿಕ ಜೀವನದೊಳಗೆ ಸುಖವಾಗಿದ್ದಾರೆ.

## ಸ್ಮರಣೀಯ ಸಂಗತಿಗಳು

### ಬೆರಗಾದೆ ಪಂ. ಪುಟ್ಟರಾಜ ಗವಾಯಿಗಳ ಸ್ಪರ್ಶಶಕ್ತಿಗೆ

ಸಿಂಧನೂರಿನ ನಾಟಕ ಕಂಪನಿ ಮಾಲಿಕರು ಗದುಗಿನ ಪಂ. ಪಂಚಾಕ್ಷರಿ ಗವಾಯಿಗಳ ಪರಮ ಶಿಷ್ಯರು. ಇವರು ಕೆಲವು ವರ್ಷಗಳ ಹಿಂದೆ ಅವರ ಪುಣ್ಯತಿಥಿ ಆಚರಿಸುವ ಸಂದರ್ಭಕ್ಕೆ ಪಂ. ಪುಟ್ಟರಾಜ ಗವಾಯಿಗಳನ್ನು ಗದುಗಿನಿಂದ

ಬರಮಾಡಿಕೊಂಡಿದ್ದರು. ಇದೊಂದು ವಿಶೇಷ ಕಾರ್ಯಕ್ರಮವಾಗಿ ಏರ್ಪಾಡಾಗಿತ್ತು. ಈ ನಾಟಕ ಕಂಪನಿಗೆ ಅಮೀನರು ಬಹಳಷ್ಟು ಪರದೆಗಳನ್ನು ಬರೆದುಕೊಟ್ಟಿದ್ದರು. ಇಬ್ಬರಿಗೂ ತುಂಬಾ ಆತ್ಮೀಯತೆ ಬೆಳೆದ ಕಾರಣ ಅಮೀನರನ್ನು ಪುಣ್ಯತಿಥಿಯ ವಿಶೇಷ ಕಾರ್ಯಕ್ರಮಕ್ಕೆ ಬರಲು ತಿಳಿಸಿದ್ದರು. ಅಲ್ಲದೇ ಈ ಸಂದರ್ಭದಲ್ಲಿ ಇವರು ಬರೆದ ಕೆಲವು ಸೀನ್ಸ್‌ಗಳು ಪ್ರಥಮವಾಗಿ ಪ್ರದರ್ಶನಗೊಳ್ಳುವವಿದ್ದವು. ಅಮೀನರು ಇಲಕಲ್ಲಿನಿಂದ ಸಿಂಧನೂರಿಗೆ ನಡೆದರು. ಕಂಪನಿಯ ಮಾಲಿಕರು ತುಂಬಾ ಆತ್ಮೀಯವಾಗಿ ಇವರನ್ನು ಬರಮಾಡಿಕೊಂಡರು. ವಿಶೇಷ ಕಾರ್ಯಕ್ರಮದ ಆರಂಭದ ಪೂರ್ವದಲ್ಲಿ ಮಾಲೀಕರು ಅಮೀನರನ್ನು ಪಂ. ಪುಟ್ಟರಾಜ ಗವಾಯಿಗಳ ದರ್ಶನಕ್ಕೆ ಕರೆದುಕೊಂಡು ಹೋಗಿ ಗವಾಯಿಗಳವರಿಗೆ "ಇವರು ಇಲಕಲ್ಲದ ಕೆ. ಅಮೀನ ಪೇಂಟರ್ ಅಂತಾ, ಖೇಮರಾಜ ಕೆಂಧೂಳಿಯವರ ಶಿಷ್ಯರು, ನಮ್ಮ ನಾಟಕಗಳಿಗೆಲ್ಲಾ ಬಣ್ಣದ ಪರದೆಗಳನ್ನು ತಯಾರಿಸಿಕೊಡುವವರು ಇವರೆ " ಎಂದು ಪರಿಚಯಿಸಿದರು. ಒಳ್ಳೆಯ ಕಲಾವಿದರಾಗಿ ಬೆಳೆಯಿರಿ ಎಂದು ತಲೆಯ ಮೇಲೆ ಕೈಯಾಡಿಸಿ ಆಶೀರ್ವದಿಸಿದರು. ಈ ಕಾರ್ಯಕ್ರಮ ತುಂಬಾ ಯಶಸ್ವಿಯಾಯಿತು. ಜನರೆಲ್ಲ ಕಂಪನಿಯ ಮಾಲಿಕರ ಭಕ್ತಿಯ ಕುರಿತು. ಗವಾಯಿಗಳ ದರ್ಶನ ಭಾಗ್ಯ ದೊರೆತ ಕುರಿತು ಅಭಿಮಾನದಿಂದ ಮಾತನಾಡಿದರು. ಕಾರ್ಯಕ್ರಮ ಮುಗಿದ ಮರುದಿವಸ ಅಮೀನರು ಇಲಕಲ್ಲಿಗೆ ಮರಳಿದರು.

ನಾಲ್ಕು ವರ್ಷ ಕಳೆದವು. ಸಿಂಧನೂರಿನ ನಾಟಕ ಕಂಪನಿಯ ಮಾಲಿಕರು ಮೊದಲಿನಂತೆಯೇ ಕಾರ್ಯಕ್ರಮ ಹಾಕಿಕೊಂಡು ಪಂ. ಪುಟ್ಟರಾಜ ಗವಾಯಿಗಳವರನ್ನು ಕರೆಸಿದರು. ಅಮೀನರನ್ನು ಬರಮಾಡಿಕೊಳ್ಳದೆ ಮರೆತಿರಲಿಲ್ಲ. ಗವಾಯಿಗಳವರ ದರ್ಶನಕ್ಕೆ ಜನ ತುಂಬಾ ಸೇರಿದ್ದರು. ಈ ಕಾರಣಕ್ಕೆ ಸರದಿಯ ಪ್ರಕಾರ ದರ್ಶನ ಪಡೆಯಲು ವ್ಯವಸ್ಥೆ ಮಾಡಲಾಗಿತ್ತು. ಅಮೀನರು ಸರದಿಯಲ್ಲಿಯೇ ನಿಂತು ಗವಾಯಿಗಳವರ ಆಶೀರ್ವಾದ ಪಡೆಯಲು ನಡೆದರು. ಮೌನಿಯಾಗಿ ತಮ್ಮ ಸರದಿ ಬಂದಾಗ ಅಮೀನರು ಗವಾಯಿಗಳವರ ಪಾದ ಮುಟ್ಟಿ ನಮಸ್ಕರಿಸುವಾಗ ಗವಾಯಿಗಳವರು "ನೀವು ಇಲಕಲ್ಲದ ಅಮೀನ ಪೇಂಟರ್ ಹೌದಲ್ಲವೆ" ಎಂದರು. ಒಂದು ಕ್ಷಣ ತಬ್ಬಿಬ್ಬಾದ ಅಮೀನರು ಹೌದು ಗುರುಗಳೆ ಎಂದರು. ಮತ್ತೆ ನೀವು ಮೊದಲಿಗಿಂತ ಈಗ ತುಂಬಾ ಬೆಳೆದಿದ್ದೀರಿ, ಇನ್ನೂ ಹೆಚ್ಚೆಚ್ಚು ಬೆಳೆಯುತ್ತಾ ಹೋಗಿ ಎಂದು ಹರಸಿದರು. ಅಮೀನರಿಗೆ ಈ ಘಟನೆ ಕಣ್ಣು ಮುಂದೆ ಕಟ್ಟಿ ನಿಂತಿತು. ಅಂಥರಾದ ಗವಾಯಿಗಳವರು ಧ್ವನಿಯನ್ನು ಕೂಡ ಕೇಳದೆ ಬರೀ ಸ್ಪರ್ಶದಿಂದ ಗುರುತಿಸಿದರಲ್ಲಾ ಎಂಥ ಶಕ್ತಿ ಅವರದು, "ಬೆರಗಾದೆ ಅವರ ಸ್ಪರ್ಶ ಶಕ್ತಿಗೆ ನಮೋಃ ನಮಃ ಆ ಪರಮ ಪೂಜ್ಯ ಗುರುವಿಗೆ " ಎಂದು ಧ್ವನಿಸುತ್ತಾ ನಂತರ ಕಂಪನಿಯ ಮಾಲೀಕರ ಜೊತೆಗೆ ಇದನ್ನು ಹಂಚಿಕೊಂಡು ಆನಂದ ಅಭಿಮಾನಪಟ್ಟರು.

## ನಮ್ಮ ನಾಡನ್ನು ಬಿಟ್ಟು ಹೋಗಲಿಲ್ಲ ಅಲ್ಲಿಗೆ

ಸಾಂಗಲಿಯ ಬಾಲಗಂಧರ್ವ ವಿದ್ಯಾಲಯದವರು ಕೆಲವು ಪರದೆಗಳನ್ನು ಬರೆಯಲು ಅಮೀನರಲ್ಲಿ ಕೇಳಿಕೊಂಡರು. ಅವರ ಹೇಳಿಕೆಯಂತೆ ದರ್ಬಾರ ವಿಂಗ್ಸ್ ದರ್ಬಾರ ಪರದೆ, ಮಹಲ್ ಪರದೆ, ಉದ್ಯಾನವನ ಹಾಗೂ ಕೈಲಾಸದ ಪರದೆಗಳನ್ನು ಅಚ್ಚುಕಟ್ಟಾಗಿ ಅಮೀನರು ತಯಾರಿಸಿ ಕೊಟ್ಟರು. ಇವರ ಪರದೆಗಳನ್ನು ಸಾಂಗಲಿಯ ಅನುಭವಿ ಕಲಾವಿದ ವಿಷ್ಣುಭಾವು ಕುಲಕರ್ಣಿಯವರಾದಿಯಾಗಿ ಬಹಳ ಜನ ಮೆಚ್ಚಿಕೊಂಡು ಉತ್ತಮ ಕಲಾವಿದರೆಂದು ಹೊಗಳಿದರು. ವಿದ್ಯಾಲಯದವರೆಗೂ ಅಮೀನರ ಕುರಿತು ಆದರ ಭಾವ ರೂಪ ತಳೆಯಿತು. ಇವರಿಗಾಗಿಯೇ ಒಂದು ಸನ್ಮಾನ ಸಮಾರಂಭ ಏರ್ಪಡಿಸಿದರು. ಸರಳ ರೀತಿಯಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಕೆಲವು ಗಣ್ಯವ್ಯಕ್ತಿಗಳು, ಕಲಾವಿದರು, ಸಾಹಿತಿಗಳು ಬಂದಿದ್ದರು. ಕಾರ್ಯಕ್ರಮ ಮುಕ್ತಾಯದ ನಂತರ ವಿಶೇಷ ಆಹ್ವಾನಿತರ ಸಲುವಾಗಿ ಭೋಜನ ಏರ್ಪಡಿಸಲಾಗಿತ್ತು. ಭೋಜನ ಸಂದರ್ಭದಲ್ಲಿಸನ್ಮಾನಿತರಾದ ಅಮೀನರನ್ನು ಕುರಿತು ಹಿರಿಯರೊಬ್ಬರು ''ನೀವು ನಮ್ಮಲ್ಲಿಯೇ ಸೇವೆ ಸಲ್ಲಿಸುವದಾದರೆ ತಮಗೊಂದು ಮನೆ, ಪೇಂಟಿಂಗ್ ಶೆಡ್ ನಿರ್ಮಿಸಲು ಒಂದು ಲಕ್ಷ ರೂಪಾಯಿ, ಅನೇಕ ರೀತಿಯ ಕೆಲಸಗಳನ್ನು ಕೊಡಿಸುತ್ತೇವೆ ಬರುವಿರಾ'' ಎಂದರು. ಆಗ ಅಮೀನರು ಆಲೋಚನೆಗಿಳಿದಾಗ ಮತ್ತೆ ಮಾತೆತ್ತಿದ ಹಿರಿಯರು ತಾವು ಇಲ್ಲಿ ನಿಲ್ಲುವುದಾದರೆ ಒಂದು ಕಂಡಿಶನ್ ಮಾತ್ರ ಒಪ್ಪಿಕೊಳ್ಳಬೇಕು, ಅದೇನೆಂದರೆ ತಾವು ರೂಪಿಸಿದ ಪೇಂಟಿಂಗ್ಸ್‌ಗಳಿಗೆ 'ಅಮೀನ ಇಲಕಲ್ಲ' ಎಂದು ಬರೆಯದೇ 'ಅಮೀನ ಸಾಂಗಲಿ' ಎಂದು ನಮೂದಿಸಬೇಕೆಂದರು. ಅಮೀನರು ಆಗ ಯೋಚಿಸಿ ತಿಳಿಸುವೆ ಎಂದು ಸುಮ್ಮನಾದರು.

ಇಲಕಲ್ಲಿಗೆ ಬಂದ ಅಮೀನರಿಗೆ ಸಾಂಗಲಿಗೆ ಹೋಗಿ ಬಿಡಲೇ ಎಂದು ಒಮ್ಮೆ ಅನಿಸತೊಡಗಿತು. ನನಗೆ ಏನಾದರೇನು, ಕಷ್ಟವೇ ಬರಲಿ ಸುಖವೇ ಬರಲಿ, ನಮ್ಮೂರು, ನಮ್ಮ ಜನ, ನಮ್ಮ ನಾಡು ನಮಗೆ ಇಷ್ಟ. ಯಾಕೆ ಅಲ್ಲಿಗೆ ಹೋಗಬೇಕೆಂದು ಇನ್ನೊಮ್ಮೆ ವಿಚಾರ ಸುಳಿಯತೊಡಗಿತು. ಈ ದ್ವಂದ್ವದಲ್ಲಿ ಬಿದ್ದ ಅಮೀನರು ಕೆಲವು ದಿವಸ ಕಳೆದ ಬಳಿಕ ಕನ್ನಡ ನಾಡನ್ನು ತೊರೆದು ಅಲ್ಲಿಗೆ ಹೋಗುವುದು ಬೇಡ ಎಂಬ ನಿರ್ಧಾರಕ್ಕೆ ಬಂದರು. ಸಾಂಗಲಿಯವರು ಮತ್ತೊಮ್ಮೆ ಈ ಕುರಿತು ಕೇಳಿದಾಗ ತಮ್ಮ ಅಚಲ ನಿರ್ಧಾರವನ್ನು ತಿಳಿಸಿದರು.

## ಬಾಲಾಜಿ ಫೋಟೊ ಪ್ರಿಂಟಿಂಗ್ ಪ್ರಸಂಗ

ಬೆಂಗಳೂರಿನ ಶ್ಯಾಮಸುಂದರ ಶೇಡಜಿಯವರಲ್ಲಿಅಮೀನ ಪೇಂಟರ್‌ರು ಕ್ಯಾಲೆಂಡರ್ ಕೆಲಸ ಮಾಡುವಾಗ ಸರಸ್ವತಿ, ರಾಘವೇಂದ್ರ ಸ್ವಾಮಿಗಳು, ಕೃಷ್ಣ, ಶ್ರೀರಾಮ, ಶ್ರೀರಾಮ ಸೀತೆ, ಆಂಜನೇಯ, ರಾಮ ಪೂಜಾ ನಿರತ ಆಂಜನೇಯ, ವೆಂಕಟೇಶ್ವರ ಮತ್ತು

ಹಲವಾರು ನಿಸರ್ಗ ರಮಣೀಯ ದೃಶ್ಯಗಳು ಅಲ್ಲಿ ಪ್ರಮುಖವಾದವುಗಳು. ಇವುಗಳನ್ನು ಮದ್ರಾಸಿಗೆ ತೆಗೆದುಕೊಂಡು ಹೋಗಿ, ಅಮೀನ ಪೇಂಟರರು ತಾವು ಚಿತ್ರಿಸಿದ ಹಲವಾರು ಕ್ಯಾಲೆಂಡರ್ ಫೋಟೋಗಳೊಂದಿಗೆ ಶೇಡಜಿಯವರ ಜೊತೆಗೆ ಮದ್ರಾಸಿಗೆ ಹೋಗಿದ್ದರು. ಕ್ಯಾಲೆಂಡರ್ ಫೋಟೋಗಳಲ್ಲಿ ತಿರುಪತಿ ಬಾಲಾಜಿ ಫೋಟೊ ಕೂಡ ಒಂದಾಗಿತ್ತು. ಎಲ್ಲ ಕ್ಯಾಲೆಂಡರ್ ಫೋಟೊ ಚಿತ್ರಗಳನ್ನು ಪ್ರೆಸ್‌ನಲ್ಲಿ ಎಕ್ಸ್‌ಪೋಜ್ ಮಾಡುತ್ತಾ ಇದ್ದು ಮುಗಿದ ನಂತರ ಹೊರಬಂದ ಎಕ್ಸ್‌ಪೋಜರ್'' ಶೇಡಜಿಯವರನ್ನು ಕುರಿತು ತಿರುಪತಿ ಬಾಲಾಜಿ ಚಿತ್ರಣವನ್ನು ಮಾಡಿದವರಾರು ಎಂದರು. ಅಮೀನ ಪೇಂಟರ್‌ರನ್ನು ಪರಿಚಯಿಸಿ ಇವರೇ ಮಾಡಿದ್ದು ಆ ಕ್ಯಾಲೆಂಡರ್ ಎಂದರು. ಆಗ ಎಕ್ಸ್‌ಪೋಜರ ಅಮೀನರನ್ನು ಕುರಿತು ''ಅದ್ಭುತ ಚಿತ್ರಕಲೆ ನಿಮ್ಮದು, ನಾನು ಎಷ್ಟೋ ವರ್ಷಗಳಿಂದ ಹಲವಾರು ಚಿತ್ರಣಗಳನ್ನು ನೋಡಿದ್ದೇನೆ. ಈ ರೀತಿ ಪರಿಣಾಮಕಾರಿ ಚಿತ್ರ ನೋಡಿಲ್ಲ, ನೀವು ಚಿತ್ರಿಸಿದ ಬಾಲಾಜಿಯ ಕೊರಳಿನಲ್ಲಿರುವ ಕಾಸಿನ ಸರದಲ್ಲಿ ಪ್ರತಿಯೊಂದು ಕಾಸಿನ ಮೇಲೂ ಕುಳಿತ ಲಕ್ಷ್ಮಿಯನ್ನು ಅತ್ಯಂತ ಸೂಕ್ಷ್ಮವಾಗಿ ಚಿತ್ರಿಸಿದ್ದು ನನಗೆ ತುಂಬ ಖುಶಿಕೊಟ್ಟಿದೆ'' ಎಂದು ಅಪ್ಪಿಕೊಂಡರು. ಅಮೀನರಿಗೆ ಈ ಘಟನೆ ಆಗಾಗ ಮರುಕಳಿಸಿ ಆನಂದಪಟ್ಟಿದ್ದುಂಟು.

## ಸೋಜಿಗಪಟ್ಟೆ ತೇರದಾಳದ ಪ್ರಭುದೇವರ ಸನ್ನಿಧಾನದಲ್ಲಿ

ನಾಟಕ ಕಂಪನಿಯೊಂದರ ಕರೆಯ ಮೇರೆಗೆ ಅಮೀನರೊಮ್ಮೆ ಬಣ್ಣದ ಪರದೆಗಳನ್ನು ಚಿತ್ರಿಸಲು ತೇರದಾಳಕ್ಕೆ ಹೋದರು. ಕಂಪನಿಯ ಮಾಲಿಕರು ಇವರಿಗೊಂದು ಇರಲು ಕೋಣೆಯನ್ನು ಬಾಡಿಗೆ ರೂಪದಲ್ಲಿ ಕೊಡಿಸಿ ಶಾಲೆಯಲ್ಲಿ ಪರದೆಗಳನ್ನು ಬರೆಯಲು ವ್ಯವಸ್ಥೆ ಮಾಡಿದರು. ವೈವಿಧ್ಯಮಯವಾದ ಪರದೆಗಳನ್ನು ಆಕರ್ಷಕವಾಗಿ ಅಮೀನರು ಚಿತ್ರಿಸತೊಡಗಿದರು. ಇದನ್ನು ಕಂಡು ಶಾಲೆಯ ಮುಖ್ಯೋಪಾಧ್ಯಾಯರು ಒಳ್ಳೆಯ ಕಲಾವಿದರೆಂದು ಅಮೀನರನ್ನು ಹೊಗಳಿದರು. ಅಲ್ಲದೆ ಅಲ್ಲಿರುವ ಪ್ರಭುದೇವರ ದೇವಾಲಯದ ಟ್ರಸ್ಟ್‌ನವರನ್ನು ಪರಿಚಯಿಸಿದರು. ಟ್ರಸ್ಟ್ ಕಮೀಟಿಯ ಅಧ್ಯಕ್ಷರು ಅಮೀನರಿಗೆ ''ಪರದೆಗಳನ್ನು ಚಿತ್ರಿಸಿದ ನಂತರ ನಮ್ಮ ಪ್ರಭುದೇವರ ದೇವಾಲಯದಲ್ಲಿ ಅವರ ಕಥಾನುಸಾರಿಯಾದ ಕೆಲವು ದೃಶ್ಯಗಳನ್ನು ಗೋಡೆಯ ಮೇಲೆ ಚಿತ್ರಿಸುವಿರಾ'' ಎಂದರು. ಈ ಕೆಲಸ ಮುಗಿದ ನಂತರ ಮಾಡೋಣ ಎಂದು ಒಪ್ಪಿಕೊಂಡರು. ತೇರದಾಳದಲ್ಲಿದ್ದಾಗ ಅಮೀನರಿಗೆ ಅನಾರೋಗ್ಯ ಕಾಡತೊಡಗಿತು. ದಿನದಿಂದ ದಿನಕ್ಕೆ ಕ್ಷೀಣವಾಗತೊಡಗಿದರು. ನಾಟಕದ ಪರದೆಗಳನ್ನೆಲ್ಲ ಹೇಗೋ ಚಿತ್ರಿಸಿದ ನಂತರ ತುಂಬಾ ಅಶಕ್ತತೆ ಕಾಡತೊಡಗಿತು. ಈ ಕಾರಣ ತೇರದಾಳದಿಂದ ಅಮೀನರು ತಮ್ಮನ್ನು ಆಸ್ಪತ್ರೆಗೆ ತೋರಿಸಿಕೊಳ್ಳಬೇಕೆಂದು ಮಹಾರಾಷ್ಟ್ರದ ಮಿರಜಕ್ಕೆ ನಡೆದರು. ಅಲ್ಲಿ ಡಾ.ಪ್ಯಾಚರೋ ಎಂಬವರಲ್ಲಿ ಪರೀಕ್ಷಿಸಿದಾಗ ''ನಿಮಗೆ ಕ್ಷಯರೋಗ, ನೀವು ಕೆಲವು ದಿವಸ ಆಸ್ಪತ್ರೆಗೆ

ದಾಖಲಾಗಬೇಕಾಗುತ್ತದೆ'' ಎಂದರು. ಅಮೀನರಿಗೆ ಚಿಂತೆ ಕಾಡತೊಡಗಿತು. ಬದುಕು ತನ್ನ ಕ್ರಿಯಾಶೀಲತೆ ಕಳೆದುಕೊಂಡಂತೆ ಭಾಸವಾಯಿತು. ಒಬ್ಬಂಟಿಗರೇ ಬಂದ ಕಾರಣ ಆಸ್ಪತ್ರೆಗೆ ದಾಖಲಾಗದೆ ಕೆಲವು ಮಾತ್ರೆಗಳನ್ನು ತೆಗೆದುಕೊಂಡು ತೇರದಾಳಕ್ಕೆ ಮರಳಿದರು.

ಈ ವಿಚಾರವನ್ನು ಅರ್ಚಕರಿಗೆ ತಿಳಿಸಿದಾಗ ''ನಿಮಗೇನು ಆಗದು, ಪ್ರಭು ಕಾಯುತ್ತಾನೆ, ಆತನ ಸೇವೆ ಮಾಡಿ'' ಎಂದರು. ಅಮೀನರಿಗೆ ಸಮಾಧಾನವಾಗಲಿಲ್ಲ. ಕೆಲಸ ಮಾಡಲು ಉತ್ಸಾಹ, ಶಕ್ತಿ ಇರಲಿಲ್ಲ. ಮೂರುನಾಲ್ಕು ದಿನ ಕಳೆದವು. ಅರ್ಚಕರು ಅಮೀನರನ್ನು ಕುರಿತು, ನೀವಿಂದು ಪ್ರಭುದೇವರ ದೇವಾಲಯದ ಆವರಣದಲ್ಲಿಯೇ ನಿದ್ರೆ ಮಾಡಿ ಎಂದರು. ಅಮೀನರಂದು ದೇವಾಲಯದ ಮುಂಭಾಗದ ಜಗುಲಿಯಲ್ಲಿ ನಿದ್ರಿಸುತ್ತಿದ್ದಾಗ ಮಧ್ಯರಾತ್ರಿಯಲ್ಲಿ ಯಾರೋ ಬಂದು ಅಮೀನರನ್ನು ಎಚ್ಚರಿಸಿದಂತಾಯಿತು. ಎದ್ದು ಕುಳಿತ ಅಮೀನರಿಗೆ ಸೋಜಿಗ. ಎದುರಿಗೆ ಪ್ರಭುದೇವರು. ಮಾತು ಮೌನ. ರೂಪ ಮಾತ್ರ ಗೋಚರ. ಆ ದಿವ್ಯ ಶಕ್ತಿಗೆ ಅಮೀನರು ನಮಸ್ಕರಿಸಿ ಮುಖ ಮೇಲೆತ್ತುವಾಗಲೇ ಮಾಯ. ಎಲ್ಲ ಕಡೆ ನೋಡಿದರು, ಎಲ್ಲೂ ಕಾಣಲಿಲ್ಲ. ಬೆಳಕು ಹರಿಯಿತು, ಅರ್ಚಕರು ಬಂದರು. ಅಮೀನರು ರಾತ್ರಿಯ ಘಟನೆಯನ್ನು ಅವರ ಮುಂದಿಟ್ಟಾಗ ''ನೀನು ಭಾಗ್ಯಶಾಲಿ, ನಿನಗಿನ್ನು ಅನಾರೋಗ್ಯವೇ ಇಲ್ಲ. ಗುರುವಿನ ಸೇವೆ ಮಾಡೆಂದರು'' ಅಮೀನರಿಗೆ ಚೈತನ್ಯ ತುಂಬಿತು, ಬದುಕು ಆಶಾದಾಯಕವಾಗಿ ಕಂಡಿತು. ಕೆಲಸಕ್ಕೆ ಸಜ್ಜಾದರು. ದೇವಾಲಯದ ಗೋಡೆಯ ಮೇಲೆ ಪ್ರಭುದೇವರ ಪಾದಪೂಜಾ ಉತ್ಸವ, ಅನುಭವ ಮಂಟಪ, ಬಸವಣ್ಣನವರ ಲಿಂಗಾರ್ಚನೆ, ದಾಸೋಹದಮಹಾ ಮನೆಯಲ್ಲಿ ಲಕ್ಷಕ್ಕಿಂತ ಅಧಿಕ ಗಣಂಗಳು, ಅಲ್ಲಮಪ್ರಭು ಹಾಗೂ ಸಿದ್ಧರಾಮರು ಬಾಗಿಲಿಗೆ ಬರುವದು, ಅಲ್ಲದೇ ಪ್ರಭುವಿನ ಲೀಲಾಮೃತ ಮುಂತಾದ ಹಲವು ಚಿತ್ರಗಳನ್ನು ಚಿತ್ರಿಸಿದರು. ಕೆಲಸವೆಲ್ಲ ಮುಗಿದ ಬಳಿಕ ತೇರದಾಳದಲ್ಲಿರುವ ಡಾ. ವಂಟಮೂರಿಯವರಲ್ಲಿ ಅಮೀನ ತಮ್ಮನ್ನೊಮ್ಮೆ ಪರೀಕ್ಷಿಸಿದಾಗ ''ನಿಮಗೆ ಯಾವುದೇ ರೋಗವಿಲ್ಲ, ಆರೋಗ್ಯವಾಗಿದ್ದೀರಿ'' ಎಂದು ತಿಳಿಸಿದರು.ಪ್ರಭುವಿನ ಶಕ್ತಿಯ ಮಹಿಮೆ ಇದೆಲ್ಲ ಎಂದುಕೊಂಡ ಅಮೀನರು ಅವರ ಆರಾಧಕರಾದರು. ಅಲ್ಲಿಂದ ಇಲ್ಲಿಯ ತನಕ ಅವರಿಗೆ ಯಾವುದೇ ರೀತಿಯ ಅನಾರೋಗ್ಯ ಕಾಡಿಲ್ಲ. ಮಾತ್ರೆ, ಇಂಜಕ್ಷನ್ ಗೊತ್ತಿಲ್ಲ ತೇರದಾಳದ ಜನ ಅಮೀನರನ್ನು ಕಂಡು ''ನೀವು ಧನ್ಯರು, ನಾವು ಎಷ್ಟೆಲ್ಲ ಪೂಜಿಸಿದರು. ನಮಗೆ ಪ್ರಭುವಿನ ದರ್ಶನ ದೊರೆತಿಲ್ಲ, ಅವರ ದರ್ಶನಭಾಗ್ಯ ಪಡೆದ ನೀವು ಶ್ರೇಷ್ಠರು'' ಎಂದು ಇಂದಿಗೂ ಮಾತನಾಡುವದುಂಟು.

## ವ್ರತ ಮಾಡಿ ಚಿತ್ರ ಬರೆದೆ

ಸಾವಿರದೊಂಬೈನೂರಾ ತೊಂಬತ್ತೆರಡರ ಸಂದರ್ಭ. ಅಮೀನರಾಗಲೆ ಒಳ್ಳೆಯ ಕಲಾವಿದರೆಂದು ಎಲ್ಲೆಲ್ಲೂ ಪ್ರಸಿದ್ಧಿ ಪಡೆದಿದ್ದರು. ಈ ವೇಳೆಯಲ್ಲಿ ಬೆಳಗಾವಿಯ

ಸ್ವಾಮಿಗಳೊಬ್ಬರು ಇಲಕಲ್ಲಿಗೆ ಬಂದು ಅಮೀನ ಪೇಂಟರ್‌ರನ್ನು ಕಂಡು ''ತಾವು ನಮಗೆ ಬನ್ನಿಮಹಾಕಾಳಿ ಫೋಟೊ ಚಿತ್ರವನ್ನು ಚಿತ್ರಿಸಿ ಕೊಡಬೇಕು. ಇದನ್ನು ತಾವು ಕಾಲ್ಪನಿಕವಾಗಿ ಬಿಡಿಸಬೇಕು. ಏಕೆಂದರೆ ಪ್ರತಿ ಸಿಗದು. ನಾನು ಆ ಕುರಿತಾದ ಮಾಹಿತಿ ನೀಡುವೆ'' ಎಂದರು. ಅಮೀನ ಪೇಂಟರ್ ಕ್ಷಣಕಾಲ ಸುಮ್ಮನಿದ್ದು ಚಿತ್ರಿಸಿ ಕೊಡುವೆ ಎಂದಾಗ, ಸ್ವಾಮಿಗಳಿಗೆ ತುಂಬಾ ಸಂತೋಷವಾಯ್ತು. ನಾನು ಬಹಳಷ್ಟು ಕಡೆಗೆ ಈ ಕುರಿತು ಅನೇಕ ಪೇಂಟರರಲ್ಲಿ ವಿಚಾರಿಸಿದೆ, ಯಾರೂ ಒಪ್ಪಿಕೊಂಡಿರಲಿಲ್ಲ. ತಾವು ಒಪ್ಪಿದ್ದು ಆನಂದ ತಂದಿದೆ. ಪೇಂಟರ್, ತಮಗೊಂದು ನಿಬಂಧನೆ, ''ತಾವು ಈ ಚಿತ್ರ ಚಿತ್ರಿಸುವಾಗ ವ್ರತ ಮಾಡಬೇಕು. ಮುಂಜಾನೆ ಸ್ನಾನದ ನಂತರ ಶುಭ ಗಳಿಗೆಯಲ್ಲಿ ಇದನ್ನು ಆರಂಭಿಸಬೇಕು ತಮಗೆ ಎಲ್ಲಿಯ ವರೆಗೆ ಆಗುತ್ತದೆ ಅಲ್ಲಿಯ ತನಕ ಚಿತ್ರಿಸಿ ಹೊರಗೆ ಹೋದಿರೆಂದರೆ ಚಿತ್ರ ಚಿತ್ರಿಸುವದನ್ನು ನಿಲ್ಲಿಸಿ ಮತ್ತೆ ಮರುದಿವಸ ಸ್ನಾನಮಾಡಿದ ನಂತರವೇ ಚಿತ್ರಿಸಲು ಆರಂಭಿಸಿ'' ಎಂದರು. ಅಮೀನರಿಗೆ ಇದೊಂದು ರೀತಿಯ ಸಂದಿಗ್ಧತೆ ಎನಿಸಿತು. ಆಗಲೇ ಚಿತ್ರ ಬರೆಯಲು ಒಪ್ಪಿಗೆ ಕೊಟ್ಟಿದ್ದರು. ಈಗ ಆಗದು ಎಂದರೆ ಹೇಗೆ ? ಕೊನೆಗೆ ಸ್ವಾಮಿಗಳಿಗೆ ತಾವು ತಿಳಿಸಿದಂತೆ ''ವ್ರತ ಮಾಡಿಯೇ ಈ ಚಿತ್ರ ಬರೆಯುವೆ'' ತಮ್ಮ ಆಶೀರ್ವಾದ ಇರಲೆಂದರು. ಸ್ವಾಮೀಜಿಯವರು ಒಳ್ಳೆಯದಾಗಲೆಂದು ಹರಸಿದರು. ಮುಂದೆ ಎಂಟು ದಿನಗಳಲ್ಲಿ ಬನ್ನಿಮಹಾಕಾಳಿ ಚಿತ್ರವನ್ನು ಸ್ವಾಮೀಜಿಯವರು ತಿಳಿಸಿದಂತೆ ವ್ರತ ಮಾಡಿ ಚಿತ್ರಿಸಿದರು.

## ಸಮರಸವೇ ಜೀವನದ ಮಧ್ಯದಲ್ಲಿ

''ರಸವೆ ಜನನ
ವಿರಸ ಮರಣ
ಸಮರಸವೇ ಜೀವನ''

ಎನ್ನುವ ಕವಿವಾಣಿಯಂತೆ ಅಮೀನ ಪೇಂಟರ್‌ರಿಂದು ಇಲಕಲ್ಲಿನಲ್ಲಿ ಬದುಕನ್ನು ನಡೆಸುತ್ತಿದ್ದಾರೆ. ತಮ್ಮ ಬದುಕಿನ ಐವತ್ತೊಂದನೆಯ ವಯಸ್ಸಿನಲ್ಲೂ ಇಂದು ನಲವತ್ತರ ಹರೆಯದ ವ್ಯಕ್ತಿಯಂತೆ ಕಾಣುವ ಇವರು ''ಮಾತು ಬೆಳ್ಳಿ ಮೌನ ಬಂಗಾರ''ವೆಂಬ ತತ್ವಕ್ಕೆ ಬದ್ಧರಾಗಿ ಮೌನವನ್ನು ಪ್ರೀತಿಸುತ್ತಾರೆ. ಕಲಾ ಪ್ರಪಂಚದಲ್ಲಿ ಅನೇಕ ವ್ಯಸನಕ್ಕೆ ತುತ್ತಾದವರ ಸಹವಾಸ ಬಂದರೂ ತಾವು ಮಾತ್ರ ಯಾವುದಕ್ಕೂ ಅಂಟಿಕೊಳ್ಳದೆ ಸ್ನೇಹಭಾವದಿಂದ ಇರುವ ಸ್ವಭಾವ ಅವರದು. ಬರುವದೇನುಂಟುಮ್ಮ ಬರುವ ಕಾಲಕ್ಕೆ ಬರುವದು. ನಾನೇಕೆ ಪ್ರಯತ್ನಿಸಲಿ. ಕೆಲಸವೇ ನನ್ನ ಜೀವ, ಮಾಡದಿದ್ದರೆ ಹೊಟ್ಟೆ ತುಂಬುವದಿಲ್ಲ, ಅದಿಲ್ಲದಿದ್ದರೆ ಜೀವಕ್ಕೆ ಸಮಾಧಾನವಿಲ್ಲ. ಇನ್ನು ಪ್ರಚಾರ, ಪ್ರದರ್ಶನಕ್ಕೆ ಸಮಯವೆಲ್ಲಿಂದ ಬಂದೀತು ಎನ್ನುತ್ತಾರೆ. ಏಕಾಂತವನ್ನೇ ಪ್ರೀತಿಸುವ ಇವರು ಸಂಘಟನೆ

ಕಟ್ಟುವದು ಬೆಳೆಸುವದರಿಂದಲೂ ಒಂದಿಷ್ಟು ದೂರವೇ. ಆದರೆ ಯಾವದೇ ಸಂಘಟನೆಯವರು ಕೇಳಿದ ಸಹಾಯಕ್ಕೆ ಸದಾ ಸಿದ್ಧ. ಅಲ್ಲಿ ಲಾಭ ನಷ್ಟದ ಮಾತೇ ಇಲ್ಲ.

ನೋವನ್ನು ನುಂಗಿ ಉಂಡುಟ್ಟು ಬೆಳೆದ ಅಮೀನರಿಗೆ ಕೆಳವರ್ಗದವರ ಕುರಿತು ಕನಿಕರ. ದೇಹ ಮನಸ್ಸು ಬಲಿಯುವ ಮುನ್ನವೇ ಶಕ್ತಿ ಮೀರಿದ ಕೆಲಸಕ್ಕೆ ಕೈಹಾಕಿ ಹೈರಾಣಾದದ್ದು ಅವರ ಮನದೊಳಗೆ ಮಾಸಿಲ್ಲ. ರಸ್ತೆಯ ಬದುಕನ್ನು ಅನುಭವಿಸಿ ಹೊಟ್ಟೆ ಬಟ್ಟೆಗೆ ತೊಂದರೆ ಇಲ್ಲದಂತೆ ಬದುಕು ಸಾಗಿಸುತ್ತಿದ್ದೇನಲ್ಲಾ ಎಂಬುದೇ ಅವರಿಗೆ ಹೆಮ್ಮೆ.

ಕಲಾಪ್ರಪಂಚದಲ್ಲಿಯ ಸಂಬಂಧಗಳು ಶಿಥಿಲವಾಗತೊಡಗಿವೆ ಎನ್ನುವ ಅಮೀನರು ಮೊದಲಿನ ಗುರು ಶಿಷ್ಯ ಪರಂಪರೆಯ ಗಾಢತೆ, ಗೌರವ, ಮರ್ಯಾದೆಗಳು ಕಡಿಮೆಯಾಗುತ್ತಿರುವದಕ್ಕೆ ಹಳಹಳಿಸುತ್ತಾರೆ. ಕಲಿಸುವವರಿದ್ದರೂ ತನ್ಮಯರಾಗಿ ಸ್ವೀಕರಿಸುವವರು ಕಡಿಮೆ, ಇದು ಗಡಿಬಿಡಿಯ ಕಾಲ, ಎಲ್ಲೆಲ್ಲೂ ವ್ಯಾಪಾರ ಮನೋಭಾವವಿದ್ದಾಗ ಹೇಗೆ ತಾನೆ ನಮ್ಮ ಸಂಬಂಧಗಳು ಗಟ್ಟಿಯಾಗುವವು. ವೃತ್ತಿ ರಂಗಭೂಮಿಯ ಕಂಪನಿಗಳು ಪ್ರೋತ್ಸಾಹವಿಲ್ಲದ ಕಾರಣ ಹೇಳಹೆಸರಿಲ್ಲದಂತೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗತೊಡಗಿವೆ. ಅದನ್ನು ನಂಬಿರುವ ಜನ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆ ಇಟ್ಟುಕೊಳ್ಳುವ ಪ್ರಸಂಗ ಬಂದೊದಗಿದೆ. ನಾನು ಪರದೆ ಬರೆಯುವದರ ಜೊತೆಗೆ ಬೇರೆ ಬೇರೆ ಪೇಂಟಿಂಗ್ಸ್‌ಗಳನ್ನು ಮಾಡುತ್ತಿರುವದರಿಂದಲೇ ಬದುಕು ಸಾಗಿಸಲು ಸಾಧ್ಯವಾಗಿದೆ ಎನ್ನುವ ಅಮೀನರು ಸರಕಾರ ಹಾಗೂ ಸಾರ್ವಜನಿಕರು ಅವರತ್ತ ಗಮನ ಹರಿಸಲು ವಿನಂತಿಸುತ್ತಾರೆ.

ಮಾಡರ್ನ್ ಪೇಂಟಿಂಗ್ಸ್‌ನ್ನು ಅಷ್ಟಾಗಿ ಪ್ರೀತಿಸದ ಅಮೀನರಿಗೆ ಸಾಂಪ್ರದಾಯಿಕ ನೈಜಕಲೆ ಕಂಡರೆ ಇಷ್ಟ. ಪ್ರಕೃತಿಯನ್ನು ಆರಾಧಿಸುವ ಇವರು ಕಾಡು, ಬೆಟ್ಟ, ಪಕ್ಷಿ, ಪ್ರಾಣಿ, ಜಲಪಾತ, ಹೂ, ಗಿಡ, ಬಳ್ಳಿ ಮುಂತಾದವುಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಬಲ್ಲೆ ಎಂಬ ಅಭಿಮಾನ ಅವರದು. ಕ್ಯಾಲೆಂಡರ್ ಫೋಟೊ ಪೌರಾಣಿಕ ವ್ಯಕ್ತಿಗಳು, ಕಥಾನುಸಾರಿ ದೃಶ್ಯಗಳು ಚಿತ್ರಿಸುವದು ಕೂಡ ಇವರಿಗೆ ಹೆಮ್ಮೆ. ಚಿತ್ರಕಲೆಯಂತೆ ಸಂಗೀತದಲ್ಲಿ ಆಸಕ್ತಿ ಹೊಂದಿದ ಅಮೀನರು ಹಿಂದುಸ್ತಾನಿ ಸಂಗೀತವನ್ನು ಇಷ್ಟಪಡುತ್ತಾರೆ. ಅದನ್ನು ಕೇಳುತ್ತಲೆ ಅನೇಕ ಕಲಾದೃಶ್ಯಗಳು ಅರಳಿ ನಿಂತಿದ್ದುಂಟು. ಬರವಣಿಗೆ ಎಂದರೆ ದೂರ ಸರಿಯುವ ಇವರಿಗೆ ಓದು ಕೂಡ ಅಷ್ಟಕ್ಕಷ್ಟೆ, ಒತ್ತಡಕ್ಕೆ ಸಿಲುಕಿ ಕಲಿಯುವದಕ್ಕಿಂತ ಸಹಜವಾಗಿಯೇ ಕಲಿತು ಕಲಾವಿದನಾದರೆ ಆತ ಅದನ್ನು ಉಸಿರಾಗಿಸಿಕೊಂಡು ಬೆಳೆಯಬಲ್ಲ ಎಂಬ ಮನೋಭಾವ ಇವರದು.

ಭವಿಷ್ಯದಲ್ಲಿ ಮಾಡಬೇಕೆಂದು ಅಮೀನರು ಹಲವಾರು ಯೋಚನೆ ಯೋಜನೆಗಳನ್ನು ಹೊತ್ತುಕೊಂಡಿದ್ದಾರೆ. ''ಕತ್ತಲಲ್ಲಿ ಚಿತ್ರ ಕಾಣುವ ಪೇಂಟಿಂಗ್

ಫಾರ್ಮುಲಾ'' ವನ್ನು ರೂಪಿಸಿರುವ ಇವರು ಅದನ್ನು ಬೆಳಕಿಗೆ ತರಬೇಕು, ಪ್ರಚಾರ ಕೊಡಬೇಕು. ಇಂದು ಬೆಳಕಲ್ಲಿ ಮಾತ್ರ ನಾವು ಪೇಂಟಿಂಗ್ಸ್ ಕಾಣುತ್ತೇವೆ. ''ನಾನು ಕಂಡು ಹಿಡಿದಿರುವ ಫಾರ್ಮುಲಾ ಪ್ರಕಾರ ಪೇಂಟಿಂಗ್ಸ್ ಮಾಡಿದರೆ ಕತ್ತಲಲ್ಲಿ ಯಾವ ಬೆಳಕಿನ ಸಹಾಯವೂ ಇಲ್ಲದೆ ಅದನ್ನು ದೃಷ್ಟಿಸಬಹುದು'' ಎಂದು ಅಭಿಮಾನದಿಂದ ಹೇಳುವ ಇವರು ಅದನ್ನು ಕಲಾಜಗತ್ತಿಗೆ ತರಬೇಕೆಂಬ ಒತ್ತಾಸೆ ಹೊಂದಿದ್ದಾರೆ. ನಮ್ಮ ಪರಿಸರದಲ್ಲಿ ಪೇಂಟಿಂಗ್ಸ್ ಶಾಲೆಗಳಲ್ಲಿ ಅಂಥದೊಂದು ಶಾಲೆ ತೆರೆದರೆ ಚೆನ್ನ ಎನ್ನುವ ಅಮೀನರು ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಶಾಲೆ ಪ್ರಾರಂಭಿಸುವ ವಿಚಾರ ಹೊತ್ತಿದ್ದಾರೆ. ಇಲಕಲ್ಲಿನಲ್ಲಿ ಪೇಂಟಿಂಗ್ಸ್ ಪ್ರಪಂಚಕ್ಕೆ ವಿಶಿಷ್ಟ ಕೊಡುಗೆಯಾಗಬಲ್ಲ ''ಆರ್ಟ್ ಗ್ಯಾಲರಿ'' ಯೊಂದನ್ನು ರೂಪಿಸುವ ಮಹಾದಾಸೆ ಇವರದು. ಹಲವು ಹತ್ತು ಯೋಜನೆಗಳನ್ನು ಹೊತ್ತ ಅಮೀನ ಪೇಂಟರ್‌ರಿಗೆ ಸರಕಾರದಿಂದಾಗಲಿ, ಸಂಸ್ಥೆಗಳಿಂದಾಗಲಿ ಸಹಕಾರ ದೊರೆಯಬೇಕಿದೆ. ಇವರ ಕಲಾ ಔನ್ನತ್ಯವನ್ನು ಗೌರವಿಸಲು ಪ್ರಶಸ್ತಿಗಳು ಬರಬೇಕಾಗಿವೆ. ಅವರ ಪೇಂಟಿಂಗ್ಸ್‌ಗಳನ್ನು ಅರ್ಥಪೂರ್ಣವಾಗಿ ಅವಲೋಕಿಸಲು ವ್ಯವಸ್ಥೆಯೊಂದನ್ನು ರೂಪಿಸಬೇಕಿದೆ.

ಸ್ನೇಹಜೀವಿ, ಪ್ರಕೃತಿ ಪ್ರೇಮಿ, ಪೇಂಟಿಂಗ್ಸ್ ಪಂಡಿತ ಅಮೀನ ಪೇಂಟರ್‌ರು ಕಟ್ಟಿಕೊಂಡ ಕನಸುಗಳು, ಹೊತ್ತ ಯೋಜನೆಗಳು ಸಾಕಾರಗೊಳ್ಳಲಿ, ಅವರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಚಿತ್ರಕಲಾ ಪ್ರಪಂಚ ಶ್ರೀಮಂತಗೊಳ್ಳಲಿ, ಅವರ ಮುಂಬಾಳು ಅರ್ಥಪೂರ್ಣವಾಗಿ ಬೆಳಗಲಿ ಎಂಬುದೆ ನಮ್ಮೆಲ್ಲರ ಆಶೆ.

# ಅನುಬಂಧಗಳು

## ೧. ಅಮೀನ ಹೇಂಟರರ ವಂಶವೃಕ್ಷ

ಮೀಯಾಸಾಬ (ಮುತ್ತಜ್ಜ)

ಅಮೀನಸಾಬ (ಅಜ್ಜ)

ಸಗರಬಿ (ಅಜ್ಜಿ)

ಬಾವಾಸಾಬ | ಹುಸೇನಸಾಬ | ಮುರ್ತುಜಸಾಬ

ಬಾವಾಸಾಬ: ಹುಸೇನಬಿ (ಹೆಂಡತಿ), ತಾಜಬೀ (ಹೆಂಡತಿ)

ಹುಸೇನಸಾಬ: ರಾಜಮಾ (ಹೆಂಡತಿ)

ಹುಸೇನಬಿ (ಹೆಂಡತಿ)

(ಮಕ್ಕಳು)

೧. ಅಮೀನ
೨. ಜುಲೇಖಾ
೩. ಅಬ್ದುಲ್
೪. ಖತೀಜಾ
೫. ಹುಸೇನ
೬. ಸಿರಾಜ
೭. ಬಿಸ್ಮಿಲ್ಲಾ
೮. ಹುಸೇನಬಿ
೯. ಮೀಯಾ

ಅಮೀನ ಹೇಂಟರ್

ದಾವಲಬೀ (ಹೆಂಡತಿ)
(ಮಕ್ಕಳು)
ಬೇಬಿಜಾನ್
ಮಹಮ್ಮದಕೌಸರ
ಫರಿದಾ
ಸಹರಾಬೇಗಂ

ರಿಜವಾನಾ (ಹೆಂಡತಿ)
(ಮಕ್ಕಳು)
ರಬ್ಬಾನಿ
ಶಬನಮ್

೨. ಅಮೀನ ಪೇಂಟರ್ ಚಿತ್ರಿಸಿದ ಪ್ರಮುಖ ಚಿತ್ರಗಳು

ಅನುಭವ ಮಂಟಪ
ಗೋಳಗುಮ್ಮಟ ವಿಜಾಪುರ
ರಾಜರ ದರ್ಬಾರ್ ಹಾಲ್
ಮಂತ್ರವಾದಿಯ ಗುಹೆಯ ದೃಶ್ಯ
ಲಕ್ಕುಂಡಿಯ ಈಶ್ವರ ದೇವಾಲಯ
ಜೋಧಪುರ ಅರಮನೆ
ಗೇಟ್ ವೇ ಆಫ್ ಇಂಡಿಯಾ
ಲಂಡನ ಚರ್ಚ್‌ವೊಂದರ ರಸ್ತೆ ನಿರ್ಮಾಣ
ಹಂಪಿಯ ವಿಜಯ ವಿಠ್ಠಲ ದೇವಾಲಯ
ಬದಾಮಿಯ ಬನಶಂಕರಿ
ಗೊಡಚಿ ವೀರಭದ್ರ
ಕೃಷ್ಣ ಬೆಣ್ಣೆ ತಿನ್ನುವ ಪ್ರಸಂಗ ದೃಶ್ಯ
ತಿರುಪತಿ ತಿಮ್ಮಪ್ಪ
ಅಲ್ಲಮ ಪ್ರಭುಗಳು
ಬಸವಣ್ಣನವರ ಲಿಂಗಾರ್ಚನೆಯ ದೃಶ್ಯ
ರಾಘವೇಂದ್ರ ಸ್ವಾಮಿಗಳು
ಶ್ರೀರಾಮನ ಸನ್ನಿಧಿಯಲ್ಲಿ ಹನುಮಂತ
ಶ್ರೀಕೃಷ್ಣದೇವರಾಯರ ಪಾತ್ರದಲ್ಲಿ ಡಾ. ರಾಜಕುಮಾರ
ಲಕ್ಷಕ್ಕೂ ಮೀರಿದ ಶಿವಗಣಂಗಳ ಲಿಂಗಾರ್ಚನೆಯ ದೃಶ್ಯ
ಇನ್ನೂ ಹಲವಾರು ಚಿತ್ರಗಳನ್ನು ಸುಂದರವಾಗಿ ಚಿತ್ರಿಸಿದ್ದಾರೆ.

೩. ಅಮೀನ ಪೇಂಟರ್‌ರು ಚಿತ್ರಿಸಿದ ಬಣ್ಣದ ಪರದೆಗಳನ್ನು ಉಪಯೋಗಿಸಿರುವ ಪ್ರಮುಖ ನಾಟಕ ಕಂಪನಿಗಳು

೧. ಶ್ರೀಶೈಲ ಮಲ್ಲಿಕಾರ್ಜುನ ನಾಟ್ಯ ಸಂಘ, ಸುಳ್ಳ
೨. ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ
೩. ಶ್ರೀ ಹೊಳೆಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ
೪. ಶ್ರೀ ಕುಮಾರೇಶ್ವರ ನಾಟ್ಯ ಸಂಘ, ಚಿತ್ತರಗಿ
೫. ಶ್ರೀಶೈಲ ನಾಟ್ಯ ಸಂಘ, ಸೂಡಿ
೬. ಶ್ರೀ ವಿಜಯ ಕಲಾ ನಾಟ್ಯ ಸಂಘ, ಇಲಕಲ್ಲ
೭. ಸರ್ವೋದಯ ನಾಟ್ಯ ಸಂಘ, ಇಲಕಲ್ಲ

೮. ಶ್ರೀ ಮಹಾಂತೇಶ್ವರ ನಾಟ್ಯ ಸಂಘ, ಇಲಕಲ್ಲ
೯. ಭಾರತಿ ನಾಟ್ಯ ಸಂಘ, ಇಲಕಲ್ಲ
೧೦. ಶ್ರೀ ಸಂಗಮೇಶ್ವರ ನಾಟ್ಯ ಸಂಘ, ಗುಡಗೇರಿ
೧೧. ಶ್ರೀ ಕೆ.ಬಿ.ಆರ್ ಡ್ರಾಮಾ ಕಂಪನಿ, ದಾವಣಗೆರೆ
೧೨. ಶ್ರೀ ತೋಂಟದಾರ್ಯ ನಾಟ್ಯ ಸಂಘ, ಮಂಡಲಗೆರೆ
೧೩. ಶ್ರೀ ಖಾಸ್ಗತೇಶ್ವರ ನಾಟ್ಯ ಸಂಘ,ತಾಳಿಕೋಟೆ
೧೪. ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರಗಿ
೧೫. ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘ, ಮೈಂದರಗಿ
೧೬. ಶ್ರೀ ಸಿದ್ದಲಿಂಗ ವಿಜಯ ನಾಟ್ಯ ಸಂಘ, ಸೂಳಿಭಾವಿ
೧೭. ಶ್ರೀ ಪಂ. ಪಂಚಾಕ್ಷರಿ ಗವಾಯಿಗಳವರ ನಾಟ್ಯ ಸಂಘ,ಗದಗ
೧೮. ಶ್ರೀ ಶ್ರೀ ಸಂಗಮೇಶ್ವರ ನಾಟ್ಯ ಸಂಘ, ಆಶಾಪೂರ
೧೯. ಶ್ರೀ ವೆಂಕಟೇಶ್ವರ ಡ್ರಾಮಾ ಕಂಪನಿ, ಮದ್ರಾಸ್
೨೦. ಶ್ರೀ ಗುರುಪ್ರಸಾದ ನಾಟ್ಯ ಸಂಘ, ಕಡಪಟ್ಟಿ
೨೧. ಶ್ರೀ ಅಮರೇಶ್ವರ ನಾಟ್ಯ ಸಂಘ, ಗುಡಗುಂಟಿ
೨೨. ಶ್ರೀ ಬ್ರಹ್ಮಾನಂದ ನಾಟ್ಯ ಸಂಘ, ತೇರದಾಳ
೨೩. ಶ್ರೀ ಅಮರೇಶ್ವರ ನಾಟ್ಯ ಸಂಘ, ಹಾಲಾಪೂರ
೨೪. ಶ್ರೀ ಕುಮಾರ ವಿಜಯ ನಾಟ್ಯ ಸಂಘ, ಚಾಲಿಹಾಳ
೨೫. ಶ್ರೀ ಮಹಂತೇಶ್ವರ ನಾಟ್ಯ ಸಂಘ, ಇಟಗಿ
೨೬. ಶ್ರೀ ಬನಶಂಕರಿ ನಾಟ್ಯ ಸಂಘ, ಇಲಕಲ್ಲ
೨೭. ಶ್ರೀ ವೀರೇಶ್ವರ ನಾಟ್ಯ ಸಂಘ, ಗದಗ
೨೮. ಶ್ರೀ ಭುವನೇಶ್ವರಿ ನಾಟ್ಯ ಸಂಘ, ಹುನಗುಂದ
೨೯. ಶ್ರೀ ನಾಗೇಂದ್ರ ನಾಟ್ಯ ಸಂಘ, ಅಳ್ಳಳ್ಳಿ ಗದ್ದಗೆ ಮಠ
೩೦. ಶ್ರೀ ಸುರವಿನುತಶಂಕರಿ ನಾಟ್ಯ ಸಂಘ, ಇಲಕಲ್ಲ
೩೧. ಶ್ರೀ ಅಮರೇಶ್ವರ ನಾಟ್ಯ ಸಂಘ, ಬೈಲಹೊಂಗಲ

೪. ಅಮೀನ ಪೇಂಟರರಿಗೆ ಸಂದ ಸನ್ಮಾನ ಹಾಗೂ ಪುರಸ್ಕಾರಗಳು

೧. ಹೊಳೆ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಇದರ ಮಾಲಿಕರಾದ ಆರ್.ಆರ್. ಅರಿಷಿಣಗೋಡಿಯವರಿಂದ ಬಳ್ಳಾರಿಯಲ್ಲಿ ಸನ್ಮಾನ
೨. ಶ್ರೀ ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರಗಿ ಇವರ ವತಿಯಿಂದ ಬೀದರನಲ್ಲಿ ರೇವಣಸಿದ್ಧೇಶ್ವರ ಸ್ವಾಮಿಗಳಿಂದ ಸನ್ಮಾನ
೩. ಬೆಂಗಳೂರಿನ ಹನುಮಂತ ನಗರದ ರಾಘವೇಂದ್ರ ಸ್ವಾಮಿ ಮಠದಲ್ಲಿ ಅರ್ಚಕರಿಂದ ಸನ್ಮಾನ

೪. ಬೆಂಗಳೂರಿನ ವಿವೇಕಾನಂದ ಆಶ್ರಮದಲ್ಲಿ ಅಲ್ಲಿಯ ಗುರುಗಳಿಂದ ಸನ್ಮಾನ

೫. ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ ಚಿತ್ತರಗಿ ಇಲಕಲ್ಲ ಇವರ ವತಿಯಿಂದ ಇಲಕಲ್‌ನಲ್ಲಿ ಗದುಗಿನ ತೋಂಟದಾರ್ಯ ಜಗದ್ಗುರುಗಳಿಂದ ಸನ್ಮಾನ

೬. ಧ್ರುವರಂಗ ಹುನಗುಂದ ಇವರಿಂದ ಹುನಗುಂದದಲ್ಲಿ ಸನ್ಮಾನ

೭. ಶ್ರೀ ಹುಚ್ಚೇಶ್ವರ ನಾಟ್ಯ ಸಂಘ, ಕಮತಗಿ ಇವರ ವತಿಯಿಂದ ಬೆಂಗಳೂರಿನಲ್ಲಿ ಹುಚ್ಚೇಶ್ವರ ಸ್ವಾಮಿಗಳಿಂದ ಸನ್ಮಾನ

೮. ಶ್ರೀ ಕುಮಾರೇಶ್ವರ ನಾಟ್ಯ ಸಂಘ, ಹಾನಗಲ್ಲ ಇವರ ವತಿಯಿಂದ ಮಹಾಲಿಂಗಪೂರದಲ್ಲಿ ಪಂ. ಪುಟ್ಟರಾಜ ಗವಾಯಿಗಳವರಿಂದ ಸನ್ಮಾನ

೯. ಕರ್ನಾಟಕ ರತ್ನ ಡಾ. ರಾಜಕುಮಾರರಿಂದ ಬೆಂಗಳೂರಿನಲ್ಲಿ ಪುರಸ್ಕಾರ

೧೦. ಮಾಜಿ ಪ್ರಧಾನಿ ದೇವೇಗೌಡರಿಂದ ದೆಹಲಿಯಲ್ಲಿ ಪುರಸ್ಕಾರ

೧೧. ಅಖಿಲ ಭಾರತ ೬೮ ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬಾಗಲಕೋಟೆ ಸಮಾವೇಶದಲ್ಲಿ ಪುರಸ್ಕಾರ

೫. ಹವ್ಯಾಸಿ ರಂಗಭೂಮಿ ನಾಟಕಗಳಿಗೆ ಅಮೀನ ಪೇಂಟರರು ಸೆಟ್‌ವರ್ಕ್ ಮಾಡಿದ ನಾಟಕಗಳು

| | |
|---|---|
| ೧. ಸತ್ತವರ ನೆರಳು | (ನೀನಾಸಂ ಹವ್ಯಾಸಿ ರಂಗ ತಂಡ, ಹೆಗ್ಗೋಡು) |
| ೨. ತುಘಲಕ್ | (ನೀನಾಸಂ ಹವ್ಯಾಸಿ ರಂಗ ತಂಡ, ಹೆಗ್ಗೋಡು) |
| ೩. ಒಂದು ವಾಡೆಯ ಕಥೆ | (ನೀನಾಸಂ ಹವ್ಯಾಸಿ ರಂಗ ತಂಡ, ಹೆಗ್ಗೋಡು) |
| ೪. ಬಾಗಲ ತೆಗಿರಪ್ಪೋ ಬಾಗಿಲ | (ಧ್ರುವರಂಗ ಹವ್ಯಾಸಿ ರಂಗತಂಡ, ಹುನಗುಂದ) |
| ೫. ಹೀಂಗ ಒಂದ ಊರಾಗ | (ಧ್ರುವರಂಗ ಹವ್ಯಾಸಿ ರಂಗತಂಡ, ಹುನಗುಂದ) |
| ೬. ಜಗಜ್ಯೋತಿ ಬಸವೇಶ್ವರ | (ಧ್ರುವರಂಗ ಹವ್ಯಾಸಿ ರಂಗತಂಡ, ಹುನಗುಂದ) |
| ೭. ನಾಗಮಂಡಲ | (ಸ್ನೇಹರಂಗ ಹವ್ಯಾಸಿ ರಂಗ ತಂಡ, ಇಲಕಲ್ಲ) |
| ೮. ಸತ್ತವರ ನೆರಳು | (ಸ್ನೇಹರಂಗ ಹವ್ಯಾಸಿ ರಂಗ ತಂಡ, ಇಲಕಲ್ಲ) |

### ೬. ಅಮೀನ ಪೇಂಟರ್‌ರ ಪ್ರಮುಖ ಚಿತ್ರಕಲಾ ಪ್ರದರ್ಶನಗಳು

೧. ಬೆಂಗಳೂರಿನ ಆರ್ಟ್ ಗ್ಯಾಲರಿಯಲ್ಲಿ ಸಾಮೂಹಿಕವಾಗಿ ನಡೆದ ಚಿತ್ರಕಲಾ ಪ್ರದರ್ಶದಲ್ಲಿ ಪ್ರದರ್ಶನ

೨. ದೆಹಲಿಯಲ್ಲಿ ನಡೆದ ''ಕರ್ನಾಟಕ ಉತ್ಸವ'' ಸಂದರ್ಭದಲ್ಲಿ ಪ್ರದರ್ಶನ

೩. ಅಖಿಲ ಭಾರತ ೬೮ ನೇ ಕನ್ನಡ ಸಾಹಿತ್ಯ ಸಮ್ಮೇಳನ ಬಾಗಲಕೋಟೆಯಲ್ಲಿ ಸಾಮೂಹಿಕ ಚಿತ್ರಕಲಾ ಪ್ರದರ್ಶನದಲ್ಲಿ ಪ್ರದರ್ಶನ

೪. ಇಲಕಲ್ಲಿನ ಧುತ್ತರಗಿ ರಂಗೋತ್ಸವ ಸಂದರ್ಭದಲ್ಲಿ ''ಏಕವ್ಯಕ್ತಿ'' ಚಿತ್ರಕಲಾ ಪ್ರದರ್ಶನ

೭. ಅಮೀನ ಪೇಂಟರ್‌ರ ನೆಚ್ಚಿನ ಕಲಾವಿದರು


೧. ಕುಂಚ ಬ್ರಹ್ಮ ಖೇಮರಾಜ ಕೆಂಧೂಳಿಯವರು

೨. ಕಲಾ ರಸಋಷಿ ಎಸ್. ಎಂ. ಪಂಡಿತ ಅವರು

೩. ಚಿತ್ರಬ್ರಹ್ಮ ರವಿವರ್ಮ ಅವರು

೪. ಶ್ರೇಷ್ಠ ಕಲಾವಿದ ಎಂ. ಎಫ್. ಹುಸೇನ್ ಅವರು

೫. ಮದ್ರಾಸಿನ ಇಂದ್ರಶರ್ಮಾ ಅವರು









ಪರಮಪೂಜ್ಯ ಶ್ರೀಗಳವರಿಂದ ನೆನಪಿನ ಕಾಣಿಕೆ ಸ್ವೀಕರಿಸುತ್ತಿರುವ ಅಮೀನ ಪೇಂಟರ್



ಬಾಗಲಕೋಟೆ ಜಿಲ್ಲಾಧಿಕಾರಿಯವರಿಂದ ಸನ್ಮಾನ ಸ್ವೀಕರಿಸುತ್ತಿರುವ ಅಮೀನ ಪೇಂಟರ್




ಪೇಂಟಿಂಗ್ಸ್‌ನಲ್ಲಿ ಮಗ್ನರಾದ ಕೆ. ಅಮೀನ ಪೇಂಟರ್




ಕಣ್ ಕೋರೈಸುವ ರಾಜರ ದರ್ಬಾರ ಹಾಲ್ (ನಾಟಕದ ಪರದೆ)




ಲಂಡನ್ ಚರ್ಚ್ ರಸ್ತೆಯ ಮಧ್ಯದಲಿ (ನಾಟಕದ ಪರದೆ)



ನೋಡಿ, ಇದು ಜೋಧಪುರ ಅರಮನೆ (ನಾಟಕದ ಪರದೆ)



ಗ್ರಾಮ್ಯತೆ ಪ್ರತಿಬಿಂಬಿಸುವ ಗ್ರಾಮವೊಂದರ ರಸ್ತೆ (ನಾಟಕದ ಪರದೆ)




ನೀರವತೆಯ ನಿರಂತರತೆ ಬಿಂಬಿಸುವ ಸ್ಮಶಾನ (ನಾಟಕದ ಪರದೆ)




ಕಾಡೊಳಗೆ ಕಡಿದಾದ ರಸ್ತೆ (ನಾಟಕದ ಪರದೆ)



ಕಲೆಯಾಗಿ ಅರಳಿದ ಕಲ್ಕತ್ತಾ ರವೀಂದ್ರ ಆಶ್ರಮ ರಸ್ತೆ (ನಾಟಕದ ಪರದೆ)



ಕಣ್ ಕೋರೈಸುವ ಹಂಪಿಯ ' ವಿಜಯ ವಿಠ್ಠಲ ದೇವಾಲಯ ' (ನಾಟಕದ ಪರದೆ)




ಮೋಹಕವಾಗಿ ಕಾಣುವ ಲಕ್ಕುಂಡಿಯ ಈಶ್ವರ ದೇವಾಲಯ (ನಾಟಕದ ಸೈಡ್‌ವಿಂಗ್)




ಗೇಟ್ ವೇ ಆಫ್ ಇಂಡಿಯಾ (ನಾಟಕದ ಸೈಡ್ ವಿಂಗ್)



ನಗರವೊಂದರ ರಸ್ತೆ (ನಾಟಕದ ಪರದೆ)



ಕುಷ್ಟಗಿ ತಾಲೂಕಿನ ಗೂಡದೂರು ಅಜ್ಜನವರ ಮಠ (ನಾಟಕದ ಪರದೆ)





ಅಣ್ಣ ಬಸವಣ್ಣ ಕಟ್ಟಿದ 'ಅನುಭವ ಮಂಟಪ' (ನಾಟಕದ ಪರದೆ)




ಭೀಷ್ಮ ವಧೆಗೆ ಸಿದ್ಧನಾದ ಶ್ರೀಕೃಷ್ಣ (ಕ್ಯಾಲೆಂಡರ್ ಚಿತ್ರ)



ದುಷ್ಟಶಕ್ತಿ ಸಂಹಾರಕ ವಿಘ್ನೇಶ್ವರ (ನಾಟಕದ ಸೈಡ್ ವಿಂಗ್)



‘ ಕಿರಿದರೊಳ್ ಪಿರಿದರ್ಥ ’ ಪ್ರತಿಬಿಂಬಿಸುವ
ಬಾಗಲಕೋಟೆ ಮಲ್ಲಿಕಾರ್ಜುನ ದೇವಾಲಯ (ಕ್ಯಾಲೆಂಡರ್ ಚಿತ್ರ)



ಭಕ್ತರ ಭಾಗ್ಯನಿಧಿ ಬದಾಮಿಯ ಬನಶಂಕರಿ (ಕ್ಯಾಲೆಂಡರ್ ಚಿತ್ರ)

# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ದಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀರ ರಭುಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಆರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ